# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

ಸಂಪುಟ:02 • ಸಂಚಿಕೆ: 74 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 14.09.2024 • ಶನಿವಾರ • ಪುಟ:04 • ಬೆಲೆ:2
Volume:02 • Issue: 74 • PRGI No:KARKAN/2023/88055 • VIJAYANAGARA • 14.09.2024 • Saturday • Page:04 • Rs:2






ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರಕ್ಕಾಗಿ ಆಲೋಚಿಸುತ್ತಿದ್ದೀರಾ ?

1 ನಂ ಜಿಲ್ಲಾಮಟ್ಟದ ದಿನಪತ್ರಿಕೆ

ಚಿಕ್ಕ ಮೊತ್ತ ದೊಡ್ಡ ಜಾಹೀರಾತು

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ ದಿನಪತ್ರಿಕೆ

85 ಸಾವಿರಕ್ಕೂ ಅಧಿಕ ಇ-ಪೇಪರ್ ಓದುಗರು

94486 33038 hampitimes@gmail.com

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ

ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper

ಹಂಪಿ ಟೈಮ್ಸ್ ಇ-ಪೇಪರ್

ಹಂಪಿ ಟೈಮ್ಸ್ ವಿಸ್ತಾರ : ಕರ್ನಾಟಕ, ಮಹರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್


# ಮಾನವ ಸರಪಳಿ ಸಾಮರಸ್ಯದ ಸಂಕೇತ

**ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿಕೆ | ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಮಾನವ ಸರಪಳಿಗೆ ಅಗತ್ಯ ಸಿದ್ಧತೆ**

**ಟಿ.ಬಿ.ಡ್ಯಾಂ–ಹೊಸಪೇಟೆ ನಗರದ ಮೂಲಕ ಭುವನಹಳ್ಳಿವರೆಗೆ 40 ಕಿ.ಮೀ ಉದ್ದ | ಶಾಲಾ ಮಕ್ಕಳಿಗೆ ವಾಹನದ ವ್ಯವಸ್ಥೆ**

■ **ಹಂಪಿ ಟೈಮ್ಸ್ ಹೊಸಪೇಟೆ**

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಪ್ರಯುಕ್ತ ಹಮ್ಮಿಕೊಳ್ಳುತ್ತಿರುವ ಮಾನವ ಸರಪಳಿ ಕಾರ್ಯಕ್ರಮಕ್ಕೆ ಜಿಲ್ಲಾಡಳಿತದಿಂದ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ಅಂತರಾಷ್ಟೀಯ ಪ್ರಜಾಪ್ರಭುತ್ವ ದಿನಾಚರಣೆಯ ಮಾನವ ಸರಪಳಿ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ರಾಜ್ಯ ಸರ್ಕಾರವು ಪ್ರಜಾಪ್ರಭುತ್ವದ ಏಕತೆ, ಸದೃಢತೆ, ಸಾಮರಸ್ಯ ಸಾರುವ ಸಂಕೇತವಾಗಿ ಮಾನವ ಸರಪಳಿ ರೂಪಿಸುವ ಮೂಲಕ ಬೃಹತ್ ಸಂವಿಧಾನದ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಸೆ.15ರಂದು ರಾಜ್ಯಾದ್ಯಂತ ನಡೆಯಲಿರುವ ಈ ಐತಿಹಾಸಿಕ ಮಾನವ ಸರಪಳಿ ಕಾರ್ಯಕ್ರಮವು ವಿಜಯನಗರ ಜಿಲ್ಲೆಯಲ್ಲಿ ನಡೆಯಲಿದ್ದು, ಟಿ.ಬಿ.ಡ್ಯಾಂ ಹತ್ತಿರದ ಗಣೇಶ ಗುಡಿಯ ಬಳಿಯ ಮೊದಲನೇ ಸೇತುವೆಯಿಂದ ಅರಂಭವಾಗಿ ಹೊಸಪೇಟೆ ನಗರದ ಮೂಲಕ ಭುವನಹಳ್ಳಿಯವರೆಗೆ ಸುಮಾರು 40 ಕಿ.ಮೀ ಉದ್ದ ನಡೆಯಲಿದೆ.

ಈ ಮಾನವ ಸರಪಳಿ ರಚನೆಗೆ ಸಾವಿರಾರು ಸಂಖ್ಯೆಯಲ್ಲಿ ಜನರು ಸೇರಬೇಕಿದೆ. ಇದಕ್ಕಾಗಿ ಪ್ರೌಢಶಾಲೆ, ಹಾಸ್ಟೆಲ್ ಮತ್ತು ಕಾಲೇಜು ವಿದ್ಯಾರ್ಥಿಗಳು, ಸಂಜೀವಿನಿ, ಎನ್.ಆರ್.ಎಲ್.ಎಂ ಹಾಗೂ ಸ್ವಸಹಾಯ ಸಂಘಗಳ ಸದಸ್ಯರು, ಜಿಲ್ಲೆಯ ಎನ್.ಜಿ.ಓ.ಗಳು ಮತ್ತು ಹೆಚ್ಚಿನ ಸಂಖ್ಯೆಯ ಸಾರ್ವಜನಿಕರು ಭಾಗವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮಾನವ ಸರಪಳಿಯ ಯಶಸ್ವಿ ನಿರ್ವಹಣೆಗಾಗಿ ಪ್ರತಿ 100 ಮೀಟರ್ ಗೆ ಒಬ್ಬರನ್ನು ಸೆಕ್ಟರ್ ಅಧಿಕಾರಿಗಳಾಗಿ, ಅದೇ ರೀತಿ ತಾಲ್ಲೂಕ ಮಟ್ಟದ ಅಧಿಕಾರಿಗಳನ್ನು ಪ್ರತಿ 1 ಕಿ.ಮೀ.ಗೆ ಒಬ್ಬರಂತೆ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಪ್ರತಿ 3 ಕಿ.ಮೀ.ಗೆ ಒಬ್ಬರಂತೆ ನೋಡಲು ಅಧಿಕಾರಿಗಳಾಗಿ ನೇಮಕಮಾಡಲಾಗಿದೆ. ಮಕ್ಕಳಿಗೆ ಸುರಕ್ಷಿತವಾಗಿ ಕರೆತರಲು ಶಾಲಾ ವಾಹನಗಳ ವ್ಯವಸ್ಥೆ ಕಲ್ಪಿಸಿದೆ. ಅಲ್ಲದೇ ಮಾನವ ಸರಪಳಿಯಲ್ಲಿ ಪಾಲ್ಗೊಳ್ಳುವ ಎಲ್ಲರಿಗೂ ಅಗತ್ಯ ಕುಡಿಯುವ ನೀರು, ವಿದ್ಯಾರ್ಥಿಗಳಿಗೆ ಬಿಸ್ಕೇಟ್ ವಿತರಿಸಲಾಗುವುದು ಎಂದರು.

ಹೊಸಪೇಟೆ ನಗರದ ಡಾ ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಸಂವಿಧಾನ ಪ್ರಸ್ತಾವನೆ ಓದುವ ಕಾರ್ಯಕ್ರಮ ಅಯೋಜಿಸಲಾಗಿದೆ. ಕಾರ್ಯಕ್ರಮದ ಎಲ್ಲಾ ಚಿತ್ರೀಕರಣವು ಡ್ರೋನ್ ಕ್ಯಾಮರಾ ಮೂಲಕ ನಡೆಯಲಿದೆ. ಭಾರತ ಸಂವಿಧಾನದ ಗೌರವ ಮತ್ತು ಘನತೆಯನ್ನು ಎತ್ತಿ ಹಿಡಿಯುವ ಕಾರ್ಯಕ್ರಮ ಇದಾಗಿದ್ದು, ಜಿಲ್ಲೆಯ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳು, ಎಲ್ಲಾ ಸಂಘ ಸಂಸ್ಥೆಗಳು, ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ್ ಮಹಮದ್ ಅಲಿ ಅಕ್ರಂ ಶಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್. ಸೇರಿದಂತೆ ಇತರರಿದ್ದರು.



### ಹೀಗಿದೆ ಸೆ.15ರ ಮಾನವ ಸರಪಳಿ ಕಾರ್ಯಕ್ರಮ ಪಟ್ಟಿ

**ಬೆಳಿಗ್ಗೆ 09:30 ರಿಂದ 09:37 ರವರೆಗೆ ಮಾನವ ಸರಪಳಿಯಲ್ಲಿ ಸರತಿ ಸಾಲಿನಲ್ಲಿ ನಿಲ್ಲುವುದು.**
**09:37 ರಿಂದ 09:40 ನಾಡಗೀತೆ,**
**09:40 ರಿಂದ 09:55 ರವರೆಗೆ ಮುಖ್ಯ ಅತಿಥಿಗಳಿಂದ ಭಾಷಣ.**
**09:55 ರಿಂದ 09:57 ರವರೆಗೆ ಸಂವಿಧಾನ ಪ್ರಸ್ತಾವನೆ ಓದುವುದು.**
**9.57 ರಿಂದ 9:59 ರವರೆಗೆ ಮಾನವ ಸರಪಳಿಯಲ್ಲಿ ಕೈ–ಕೈ ಹಿಡಿದು ನಿಲ್ಲುವುದು.**
**ಬೆಳಿಗ್ಗೆ 10 ಗಂಟೆಗೆ ಮಾನವ ಸರಪಳಿಯಲ್ಲಿಯೇ ಎರಡೂ ಕೈಗಳನ್ನು ಮೇಲೆತ್ತಿ "ಜೈ ಹಿಂದ್, ಜೈ ಕರ್ನಾಟಕ" ಘೋಷಣೆ ಕೂಗುವುದು.**

> ಮುಖ್ಯಮಂತ್ರಿಯವರ ಮಾರ್ಗದರ್ಶನದಲ್ಲಿ ಈ ಕಾರ್ಯಕ್ರಮವು ರಾಜ್ಯಾದ ಬೀದರ ಜಿಲ್ಲೆಯಿಂದ ಚಾಮರಾಜನಗರ ಜಿಲ್ಲೆವರೆಗೆ ಆಯೋಜನೆಯಾಗಿದೆ. ಪ್ರತಿಯೊಬ್ಬರು ಸ್ವ ಇಚ್ಛೆಯಿಂದ ಭಾಗಿಯಾಗಿ, ಕಾರ್ಯಕ್ರಮ ಯಶಸ್ವಿಗೊಳಿಸಿ.
> – **ಬಿ.ಜೆಡ್.ಜಮೀರ್ ಅಹಮದ್ ಖಾನ್**
> ವಿಜಯನಗರ–ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ

> ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಅಂಗವಾಗಿ ವಿಜಯನಗರ ಜಿಲ್ಲೆಯಲ್ಲಿ ಹಮ್ಮಿಕೊಂಡಿರುವ ಮಾನವ ಸರಪಳಿಯಲ್ಲಿ ಸರ್ವರೂ ಪಾಲ್ಗೊಂಡು ಕಾರ್ಯಕ್ರಮಕ್ಕೆ ಮೆರಗು ಹೆಚ್ಚಿಸಬೇಕು.
> – **ಎಚ್.ಆರ್.ಗವಿಯಪ್ಪ,** ಶಾಸಕ, ಹೊಸಪೇಟೆ

## ಮೈಕ್ರೋ ನ್ಯೂಸ್

### ಕೊಪ್ಪಳ ಜಿಲ್ಲೆಯಲ್ಲಿ ಮಾನವ ಸರಪಳಿ ರೂಟ್ ಮ್ಯಾಪ್ ಅಂತಿಮ

**ಹಂಪಿ ಟೈಮ್ಸ್ ಕೊಪ್ಪಳ**

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಸೆಪ್ಟಂಬರ್ 15ರಂದು ಕೊಪ್ಪಳ ಜಿಲ್ಲೆಯಲ್ಲಿ ನಡೆಸಲಾಗುವ ಮಾನವ ಸರಪಳಿ ಕಾರ್ಯಕ್ರಮಕ್ಕೆ ಕೊಪ್ಪಳ ಜಿಲ್ಲೆಯಲ್ಲಿ ರೂಟ್ ಮ್ಯಾಪ್‌ನ್ನು ಅಂತಿಮಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ತಿಳಿಸಿದ್ದಾರೆ.

ಸೆಪ್ಟೆಂಬರ್ 15ರಂದು ಮಾನವ ಸರಪಳಿ ಕಾರ್ಯಕ್ರಮವು ಕೊಪ್ಪಳ ತಾಲೂಕಿನ ಬೆಳಗಟ್ಟಿ ಗ್ರಾಮದಿಂದ ಬೆಳಗ್ಗೆ 9.30ಕ್ಕೆ ಪ್ರಾರಂಭವಾಗಿ ಹಿರೇಸಿಂಧೋಗಿ, ಚಿಕ್ಕಿಸಿಂಧೋಗಿ, ಕೊಪ್ಪಳ ನಗರ, ಗಿಣಿಗೇರಾ, ಹೊಸಳ್ಳಿ ಮಾರ್ಗವಾಗಿ ಕೊಪ್ಪಳ ಭೌಗೋಳಿಕ ಸರಹದ್ದಾದ ಮುನಿರಾಬಾದ್ ಡ್ಯಾಮವರೆಗೆ ಜಿಲ್ಲೆಯಲ್ಲಿ ಒಟ್ಟು 53 ಕಿಲೋ ಮೀಟರ್ ಮಾನವ ಸರಪಳಿಯನ್ನು ರಚನೆಯಾಗಲಿದೆ. ಈ ಮಾನವ ಸರಪಳಿಯ ಮುಖ್ಯ ಸಮಾರಂಭವು ಕೊಪ್ಪಳ ನಗರದ ಅಶೋಕ ಸರ್ಕಲ್‌ನಲ್ಲಿ ನಡೆಯಲಿದೆ ಎಂದು ತಿಳಿಸಿದ್ದಾರೆ.

### ಕೃಷಿ ಇಲಾಖೆ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕೃಷಿ ಇಲಾಖೆ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಬಳ್ಳಾರಿ ಹಾಗೂ ಕುರುಗೋಡು ತಾಲ್ಲೂಕು ವ್ಯಾಪ್ತಿಯ ರೈತರಿಗೆ ವಿವಿಧ ಯೋಜನೆಯಡಿ ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಕೃಷಿ ಯಂತ್ರೀಕರಣ ಹಾಗೂ ಕೃಷಿ ಸಂಸ್ಕರಣ ಘಟಕಗಳಿಗೆ ಸಾಮಾನ್ಯ ವರ್ಗದವರಿಗೆ ಶೇ.50 ರಷ್ಟು ಹಾಗೂ ಸೂಕ್ಷ್ಮ ನೀರಾವರಿ ಯೋಜನೆಯಡಿ ಎಲ್ಲಾ ವರ್ಗದ ರೈತರಿಗೆ ತುಂತುರು ನೀರಾವರಿ ಘಟಕಗಳಿಗೆ ಶೇ.90 ರಷ್ಟು ಸಹಾಯಧನ ನೀಡಲಾಗುತ್ತದೆ.

ಆಸಕ್ತ ರೈತರು ಹತ್ತಿರ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ ಯೋಜನೆಗಳಿಗೆ ಹೆಸರು ನೋಂದಾಯಿಸಿಕೊಳ್ಳಬಹುದು. ರೈತರಿಂದ ಹೆಚ್ಚಿನ ಅರ್ಜಿಗಳು ಸ್ವೀಕೃತಿಯಾದಲ್ಲಿ ನಿಯಾಮಾನುಸಾರ ಜೇಷ್ಠ್ಯತೆ ಅನ್ವಯ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಬಳ್ಳಾರಿಯ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಭೇಟಿ ನೀಡಬಹುದು ಎಂದು ತಿಳಿಸಿದ್ದಾರೆ.

### ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಶಿಶು ಅಭಿವೃದ್ಧಿ ಯೋಜನೆಯಡಿ ಹೂವಿನಹಡಗಲಿ ವ್ಯಾಪ್ತಿಯಲ್ಲಿ ಖಾಲಿ ಇರುವ 01 ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಅಕ್ಟೋಬರ್ 6 ಕೊನೆಯದಿನವಾಗಿದ್ದು, ವೆಬ್‌ಸೈಟ್ ವಿಳಾಸ; https://karnemakaone.kar.nic.in/abcd/ ಮೂಲಕ ಅರ್ಹ ಮಹಿಳಾ ಹಾಗೂ ಲಿಂಗತ್ವ ಅಲ್ಪ ಸಂಖ್ಯಾತ ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಹೂವಿನಹಡಗಲಿಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಥಿಗಳು ಸುಜ್ಞಾನ ನಿಧಿ ಶಿಷ್ಯ ವೇತನ ಸದುಪಯೋಗ ಪಡಿಸಿಕೊಳ್ಳಿ

**ತಹಶಿಲ್ದಾರ ಅಮರೇಶ್ ಜಿ.ಕೆ. ಹೇಳಿಕೆ | 131 ವಿದ್ಯಾರ್ಥಿಗಳಿಗೆ 21 ಲಕ್ಷ ರೂ. ಮೀಸಲಿರಿಸಿದೆ**



■ **ಹಂಪಿ ಟೈಮ್ಸ್ ಕೊಟ್ಟೂರು**

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸ್ವ–ಇಚ್ಛೆಯಿಂದ ರಾಜ್ಯದಾದ್ಯಂತ ವಿದ್ಯಾರ್ಥಿ ವೇತನ ನೀಡುತ್ತಿದೆ, ಇದು ಸಮಾಜಿಕ ಕಳಕಳಿ ಎತ್ತಿಡಿಯುತ್ತೆ, ಪೂಜ್ಯರು ಡಾ.ವೀರೇಂದ್ರ ಹೆಗಡೆ ಮತ್ತು ಅವರ ಶ್ರೀಮತಿಯವರ ಈ ಮಹತ್ವದ ಚಿಂತನೆಗೆ ಶ್ಲಾಘನೀಯ, ಈ ಶಿಷ್ಯ ವೇತನವನ್ನು ವಿದ್ಯಾರ್ಥಿಗಳು ಸರಿಯಾಗಿ ಬಳಸಿಕೊಂಡು, ಶೈಕ್ಷಣಿಕ ಪ್ರಗತಿ ಹೊಂದಬೇಕೆಂದು ತಹಶಿಲ್ದಾರ ಅಮರೇಶ್ ಜಿ.ಕೆ. ಹೇಳಿದರು.

ಪಟ್ಟಣದ ಸರ್ಕಾರಿ ಬಸ್ ನಿಲ್ದಾಣ ಹತ್ತಿರದ ಮರುಳಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆಯ ಬಿ.ಸಿ ಟ್ರಸ್ಟ್ ಕೊಟ್ಟೂರು ಆಯೋಜಿಸಿದ ವೀರೇಂದ್ರ ಹೆಗ್ಗಡೆಯವರ ಮತ್ತು ಮಾತೃ ಶ್ರೀ ಡಾ. ಹೇಮಾವತಿ ಹೆಗ್ಗಡೆಯವರ ಆಶೀರ್ವಾದ ದೊಂದಿಗೆ ಸುಜ್ಞಾನನಿಧಿ ಶಿಷ್ಯವೇತನ ಮಂಜೂರಾತಿ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಯೋಜನೆಯ ಕೊಪ್ಪಳ ಪ್ರಾದೇಶಿಕ ನಿರ್ದೇಶಕರು ಸತೀಶ್ ಶೆಟ್ಟಿ ಪೂಜ್ಯರು ಕೊಟ್ಟೂರು ತಾಲೂಕಿನಲ್ಲಿ 131 ವಿದ್ಯಾರ್ಥಿಗಳಗೆ ಒಂದು ವರ್ಷದಲ್ಲಿ 21 ಲಕ್ಷ ರೂ. ಯನ್ನು ಯೋಜನೆಯಲ್ಲಿ ಮೀಸಲಿರಿಸಿದ್ದಾರೆ, ಇದು ಇಲ್ಲಿನ ಸಂಸ್ಥೆಯ ಹೆಮ್ಮೆಯ ವಿಷಯ ಎಂದು ಹೇಳಿದರು.

ಡಿ.ಎಸ್.ಎಸ್ ಮುಖಂಡರು ಬದ್ದಿ ಮರಿಸ್ವಾಮಿ ಮಾತನಾಡಿ ಅಂಬೇಡ್ಕರ್ ಅವರ ಅಭಿಪ್ರಾಯದಂತೆ ಬಡತನ, ನಿರ್ಮೂಲನೆಗೆ ಶಿಕ್ಷಣ ಅತ್ಯಂತ ಮಹತ್ವ ಈ ಹಿನ್ನೆಲೆ ಧರ್ಮಸ್ಥಳ ಸ್ವ ಸಹಾಯ ಸಂಘದ ಸೌಲಭ್ಯಗಳನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಂಡು ಶೈಕ್ಷಣಿಕವಾಗಿ ಭವಿಷ್ಯವನ್ನು ಉಜ್ವಲಗೊಳ್ಳಿಸಿಕೊಳ್ಳಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಪ ಪಂ.ಅಧ್ಯಕ್ಷೆ ಬಿ ರೇಖಾ ರಮೇಶ್,ಪಪಂ ಉಪಾಧ್ಯಕ್ಷ ಜಿ.ಸಿದ್ದಯ್ಯ, ಯೋಜನಾಧಿಕಾರಿ ನವೀನ ಕುಮಾರ್ ಹೆಚ್.ಡಿ, ಕಲ್ಯಾಣ ಮಂಟಪ ಮಾಲಿಕರು ರಾಂಪುರ ವಿವೇಕಾನಂದ, ಜಿಲ್ಲಾ ಜನ ಜಾಗೃತಿ ವೇದಿಕೆ ಸದಸ್ಯರು ಮಲ್ಲಿಕಾರ್ಜುನ, ಯೋಗಿಶ್ವರ ದಿನ್ನೆ, ಕ.ಸಾ.ಪ ತಾಲೂಕು ಅಧ್ಯಕ್ಷ ದೇವರಮನಿ ಕೊಟ್ರೇಶಪ್ಪ, ಯೋಜನೆಯ ಕೃಷಿ ಅಧಿಕಾರಿ ಮಹಾಂತೇಶ್,ಯೋಜನೆಯ ಜೆವಿಕೆ ಅಧಿಕಾರಿ ಸೌಮ್ಯ,ಸಿಬ್ಬಂದಿ ಪ್ರಿಯಾಂಕಾ, ಅಜಿತ್, ಸೇವಾ ಪ್ರತಿನಿಧಿ ಲಕ್ಷ್ಮೀ, ಸಂಘದ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಪತ್ರಕರ್ತರು ಹೊಸ ಸ್ವರೂಪಕ್ಕೆ ಅಪ್ಡೇಟ್ ಆಗಬೇಕು : ಕೆ.ವಿ.ಪ್ರಭಾಕರ



■ **ಹಂಪಿ ಟೈಮ್ಸ್ ದಾವಣಗೆರೆ**

ಪತ್ರಕರ್ತರು ಹಾರ್ಡ್ ವೇರ್ ಇದ್ದಂತೆ. ಕಾಲಕ್ಕೆ ತಕ್ಕ ಸಾಫ್ಟ್ ವೇರ್ ಅಳವಡಿಸಿಕೊಳ್ಳುವ ಸವಾಲು ನಮ್ಮೆದುರಿಗಿದೆ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಉದ್ಘಾಟಿಸಿ, ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಮಾತನಾಡಿದರು. ಪತ್ರಕರ್ತರು ಭವಿಷ್ಯದ ಸವಾಲುಗಳನ್ನು ಎದುರಿಸಲು ನಾವು ಸಜ್ಜಾಗಬೇಕಿದೆ. ಈಗ ತಂತ್ರಜ್ಞಾನದ ವೇಗ ವಿಪರೀತ ಹೆಚ್ಚಿದೆ. ಈ ವೇಗಕ್ಕೆ ನಾವು ಪತ್ರಕರ್ತರು ಸಿದ್ದಗೊಳ್ಳಬೇಕಿದೆ. ಮೊಬೈಲಿನ ಒಂದು ಆವಿಷ್ಕಾರ ಉಳಿದೆಲ್ಲಾ ವೃತ್ತಿಗಳಿಗಿಂತ ಪತ್ರಿಕಾವೃತ್ತಿಯಲ್ಲಿ ಅಪಾರ ಬದಲಾವಣೆ ತಂದಿದೆ. ಮೊಬೈಲ್ ಬರ್ತಿದ್ದ ಹಾಗೆ STD ಬೂತ್‌ಗಳು ಹೋದವು. ಲ್ಯಾಂಡ್ ಲೈನ್ ಫೋನ್ ಗಳು ಹೋದವು. >>2

# ಸಹಾಯಧನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಮೀನುಗಾರಿಕೆ ಇಲಾಖೆ ವತಿಯಿಂದ ಪ್ರಸ್ತಕ ಸಾಲಿಗೆ ವಿವಿಧ ಯೋಜನೆಗಳಡಿ ಸಹಾಯಧನ ಸೌಲಭ್ಯ ಪಡೆಯಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಮೀನುಗಾರಿಕೆ ಉಪನಿರ್ದೇಶಕ ಶಿವಣ್ಣ ಅವರು ತಿಳಿಸಿದ್ದಾರೆ. ಅರ್ಹ ಅರ್ಜಿದಾರರು ಅಗತ್ಯ ದಾಖಲೆಗಳೊಡನೆ ವೆಬ್‌ಸೈಟ್ https://ballari.nic.in ಗೆ ಭೇಟಿ ನೀಡಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದು ಅಥವಾ ಆಯಾ ತಾಲ್ಲೂಕಿನ ಮೀನುಗಾರಿಕೆ ಇಲಾಖೆ ಕಚೇರಿ ಮುಖಾಂತರ ಆನ್‌ಲೈನ್‌ನಲ್ಲಿಯೂ ಸಹ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಸೆ.25 ಕೊನೆಯ ದಿನವಾಗಿದೆ.

**ಯೋಜನೆಗಳ ವಿವರ:** ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮೀನು ಕೃಷಿಕರಿಗೆ ರೂ.10 ಸಾವಿರ ವೆಚ್ಚದಲ್ಲಿ ಉಚಿತ ಮೀನುಗಾರಿಕೆ ಸಲಕರಣೆ ಕಿಟ್‌ಗಳನ್ನು ವಿತರಿಸಲಾಗುವುದು. ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ ಮತ್ಸ್ಯವಾಹಿನಿ ಯೋಜನೆಯಡಿ ಐಸ್‌ಬಾಕ್ಸ್‌ನೊಂದಿಗೆ ಮೊಪೆಡ್ ಮತ್ತು ಸೈಕಲ್ ಖರೀದಿಸಲು ಸಹಾಯಧನ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿ, ಸಂಡೂರು ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿ ಅಥವಾ ಮೀನುಗಾರಿಕೆ ಕಚೇರಿಗೆ ಸಂಪರ್ಕಿಸಿ.

# ವಿವಿಧ ಯೋಜನೆಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಇದರ ಆಧೀನದಲ್ಲಿ ಬರುವ ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಗಳಿಂದ 2024–25ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ನೇರಸಾಲ ಯೋಜನೆ, ಉದ್ಯಮ ಅಭಿವೃದ್ಧಿ ಯೋಜನೆ, ಮೈಕ್ರೋ ಕ್ರೆಡಿಟ್ ಪ್ರೇರಣಾ ಯೋಜನೆ (ಮಹಿಳಾ ಸ್ವ–ಸಹಾಯ ಗುಂಪುಗಳಿಗೆ), ಸ್ವಾವಲಂಬಿ ಸಾರಥಿ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಭೂ ಒಡೆತನ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಸೇವಾ ಸಿಂಧು, ಗ್ರಾಮ ಒನ್, ಕರ್ನಾಟಕ ಒನ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಅಕ್ಟೋಬರ್ 10 ಕೊನೆಯ ದಿನವಾಗಿದ್ದು, ವೆಬ್‌ಸೈಟ್ ಪೋರ್ಟಲ್ ವಿಳಾಸ :https://sevasindhu.karnataka.gov.in/Grama one / Karnataka one ನಲ್ಲಿ ಅರ್ಜಿ ಸಲ್ಲಿಸಬಹುದು ಎಂದು ನಿಗಮದ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಬಳ್ಳಾರಿ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪತ್ರಕರ್ತರು ಹೊಸ ಸ್ವರೂಪಕ್ಕೆ ಅಪ್ಡೇಟ್ ಆಗಬೇಕು

**ಮೊದಲ ಪುಟದಿಂದ**

ವಾಚ್‌ಗಳು, ಗಡಿಯಾರಗಳು ಹೋದವು. ಪೆನ್ನು ಪೇಪರ್ ಹಿಡಿದು ನೋಟ್ಸ್ ಮಾಡಿಕೊ ಳ್ಳುವುದೂ ಮುಕ್ಕಾಲು ಭಾಗ ಕಡಿಮೆ ಆಗಿದೆ. ಪುಸ್ತಕ ಓದಿ ಮಾಹಿತಿ ಪಡೆಯುವುದೂ ನಿಂತುಹೋಗಿದೆ. ಇವೆಲ್ಲವನ್ನೂ ಈಗ ಮೊಬೈಲ್ ನಲ್ಲೇ ಮಾಡಿಕೊಳ್ತೇವೆ.

ಅಷ್ಟೆ ಅಲ್ಲ. ಮೊಬೈಲ್ ಬಂದ ಮೇಲೆ ದುಡ್ಡು ಕೂಡ ಬದಲಾಗಿದೆ. ಮೊಬೈಲ್ ಬ್ಯಾಂಕಿಂಗ್ ಮೂಲಕವೇ ಸಂಬಳವೂ ಆಗಿ ಬಿಡತ್ತೆ. ಂಖಿಒ ಕಾರ್ಡ್ ಗಳೂ ಈಗ ಮಾಯ ಆಗುತ್ತಿವೆ. ಸಾಫ್ಟ್ ವೇರ್ ಗಳು ಬಂದ ಮೇಲೆ ಪ್ಲಾಸ್ಟಿಕ್ ಕಾರ್ಡ್ ಗಳ ಅಗತ್ಯವೂ ಇಲ್ಲವಾಗಿದೆ. Paytm ಕೇವಲ ಒಂದು software. ಇದರ ಬಳಿ ಬ್ಯಾಂಕ್ ಇಲ್ಲ. ಆದರೆ ಬ್ಯಾಂಕಿಂಗ್ ವ್ಯವಸ್ಥೆಯೇ paytm ಕೈಯಲ್ಲಿದೆ.

ವಿಶ್ವದಲ್ಲಿ ಅತಿ ಹೆಚ್ಚು ಕಾರುಗಳನ್ನು ಹೊಂದಿರುವ ಸಂಸ್ಥೆ UBER ಮತ್ತು OLA. ಮಜಾ ಅಂದರೆ ಇವೆರಡೂ ಕಂಪನಿಗಳೂ ಒಂದೇ ಒಂದು ಕಾರನ್ನೂ ಖರೀದಿಸಿಲ್ಲ. ಕೇವಲ ಒಂದು software ನಲ್ಲಿ ಅತಿ ಹೆಚ್ಚು ಕಾರುಗಳನ್ನು ಹೊಂದಿದ್ದು ವಿಶ್ವದಲ್ಲೇ ಅತಿ ಹೆಚ್ಚು ಡ್ರೈವರ್ ಗಳಿಗೆ ಕೆಲಸ ಕೊಟ್ಟಿದೆ. ಅಮೆಜಾನ್ ಯಾವ ವಸ್ತುವನ್ನೂ ಉತ್ಪಾದಿಸಲ್ಲ. ಆದರೆ ಅಮೆಜಾನ್ ಅಪ್ಪ-ಅಮ್ಮ ಬಿಟ್ಟು ಎಲ್ಲವನ್ನೂ ಮಾರಾಟ ಮಾಡುತ್ತದೆ ಎಂದು ಹಾಸ್ಯದ ದಾಟಿಯಲ್ಲಿ ವಿವರಿಸಿದರು.

ಹೊಸ software ಗಳು, ಹೊಸ ತಂತ್ರಜ್ಞಾನ ಪತ್ರಿಕಾ ಕ್ಷೇತ್ರಕ್ಕೂ ವೇಗವಾಗಿ ಬರುತ್ತಿವೆ. ನಾವು ಪತ್ರಕರ್ತರು ಹಾರ್ಡ್ ವೇರ್ ಗಳಿದ್ದಂತೆ. ನಾವು ನಮ್ಮೊಳಗಿನ software ನ್ನು update ಮಾಡಿಕೊಳ್ಳಬೇಕಿದೆ ಎಂದು ಕರೆ ನೀಡಿದರು.

ನಮ್ಮನ್ನು ನಾವು ಹೊಸ ವೇಗಕ್ಕೆ, ಹೊಸ ಸ್ವರೂಪಕ್ಕೆ update ಮಾಡಿಕೊಳ್ಳಬೇಕಿದೆ. ನಾನು ಮೊಳೆ ಜೋಡಿಸುವ ಕಾಲದಿಂದ ಪತ್ರಿಕಾ ವೃತ್ತಿಯಲ್ಲಿ ಇದ್ದೇನೆ. ಇವತ್ತಿನ ಶೇ50 ರಷ್ಟು ಪತ್ರಕರ್ತರು ಮೊಳೆ ಜೋಡಿಸುವುದನ್ನು ನೋಡಿಯೇ ಇಲ್ಲ. ಹಾಗೆ ಮುಂದಿನ 10-20 ವರ್ಷಗಳಲ್ಲಿ ಪತ್ರಿಕಾವೃತ್ತಿ ಇವತ್ತಿನ ರೀತಿ ಇರುವುದಿಲ್ಲ. ನ್ಯೂಸ್ ರೂಮುಗಳು, ಪತ್ರಿಕಾ ಕಚೇರಿಗಳೇ ಇಲ್ಲದೆ ಪತ್ರಕರ್ತರು ಎಲ್ಲೆಲ್ಲಿ ಇರ್ತೀವೋ ಅಲ್ಲಿಂದಲೇ, ಅವರ ಮನೆಗಳನ್ನೇ, ಕಾಫಿ ಶಾಪ್ ಗಳನ್ನೇ ಕಚೇರಿ ಅಂತ ತಿಳಿದು ಕೆಲಸ ಮಾಡಬೇಕಾಗಬಹುದು. ಕೋವಿಡ್ ಅವಧಿಯಲ್ಲಿ ಇದರ ಸ್ಯಾಂಪಲ್ ಹೇಗಿರತ್ತೆ ಅಂತ ನಮಗೆ ಅನುಭವ ಆಗಿದೆ . ಈಗ ಬಹುತೇಕ ದೊಡ್ಡ ಸಂಸ್ಥೆಗಳೂ ಕೃತಕ ಬುದ್ದಿಮತ್ತೆಯನ್ನು ಅಳವಡಿಸಿಕೊಳ್ಳಲು ಮುಂದಾಗಿವೆ. ಕೆಲವೇ ವರ್ಷಗಳಲ್ಲಿ ಕೃತಕ ಬುದ್ದಿಮತ್ತೆ ಎಲ್ಲಾ ನ್ಯೂಸ್ ರೂಮುಗಳಲ್ಲೂ ಚಾಲ್ತಿಗೆ ಬರುತ್ತವೆ. ಮೇಕಪ್ ಅಗತ್ಯವಿಲ್ಲದ ಕೃತಕ ಸುಂದರಿಯರು ನ್ಯೂಸ್ ಆಂಕರ್‌ಗಳಾಗುತ್ತಾರೆ ಎಂದರು.

ಈ ಸವಾಲಿಗೆ ನಾವುಗಳು ಸಜ್ಜಾಗಬೇಕಿದೆ. ಈ ತಂತ್ರಜ್ಞಾನವನ್ನು ಅರಿಯುವ, ಕಲಿಯುವ ಕಾರ್ಯಾಗಾರಗಳು ಮತ್ತು ಶಿಬಿರಗಳನ್ನು ಪತ್ರಕರ್ತರ ಸಂಘಗಳು ಹೆಚ್ಚೆಚ್ಚು ಸಂಘಟಿಸಬೇಕು. ಇದಕ್ಕಾಗಿ ವಾರ್ತಾ ಇಲಾಖೆ, ಮಾಧ್ಯಮ ಅಕಾಡೆಮಿ ಸಹಯೋಗ ಪಡೆಯಬಹುದು. ಮೊಬೈಲ್ ನಲ್ಲಿ ಕ್ರಾಪ್ ಮಾಡಿದ ಒಂದು ಸುಳ್ಳು ಫೋಟೋ, voice converter ಮೂಲಕ ಸೃಷ್ಟಿಸಿದ ಒಂದು ಆಡಿಯೊ, ಕೃತಕ ಬುದ್ದಿಮತ್ತೆ ಮೂಲಕ ರೆಡಿಯಾದ ಒಂದು ವಿಡಿಯೊ ಸಮಾಜದಲ್ಲಿ ದೊಡ್ಡ ಗಲಭೆಗಳನ್ನು ಸೃಷ್ಟಿಸಿ ಸರ್ವನಾಶ ಮಾಡಬಹುದು ಎಂದು ಆತಂಕ ವ್ಯಕ್ತಪಡಿಸಿದರು.

ಇವತ್ತು ತಂತ್ರಜ್ಞಾನವನ್ನು ಸಮಾಜದ ಶಾಂತಿ ಕೆಡಿಸಲು, ಸುಳ್ಳನ್ನು ಅತಿ ವೇಗವಾಗಿ ಹರಡಲು ಬಳಸಿಕೊಳ್ಳಲಾಗುತ್ತಿದೆ. ಇದನ್ನು ತಡೆಯುವ ಜವಾಬ್ದಾರಿ ಪತ್ರಕರ್ತರ ಮೇಲಿದೆ. ಇದಕ್ಕಾಗಿ ಸೈಬರ್ ತಂತ್ರಜ್ಞಾನ ಮತ್ತು ಸುಳ್ಳು ಪತ್ತೆ ತಂತ್ರಜ್ಞಾನದ ಅರಿವು ಪತ್ರಕರ್ತರಿಗೆ ಅನಿವಾರ್ಯ. ಆದ್ದರಿಂದ ಪತ್ರಕರ್ತರ ಸಂಘಗಳು, ಮಾಧ್ಯಮ ಸಂಸ್ಥೆಗಳು ಒಟ್ಟಾಗಿ ಕಾರ್ಯಾಗಾರಗಳ ಮೂಲಕ ಸೈಬರ್ ಮತ್ತು ಕೃತಕ ಬುದ್ದಿಮತ್ತೆಯ ತಂತ್ರಜ್ಞಾನದ ಅಪಾಯ ಮತ್ತು ಅವಕಾಶಗಳನ್ನು ಅರಿತುಕೊಳ್ಳಬೇಕಿದೆ. ಈ ದಿಕ್ಕಿನಲ್ಲಿ ಪ್ರಯತ್ನಿಸೋಣ ಎಂದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್, ಕೊಪ್ಪಳ ವಿವಿಯ ವಿಸಿ ಬಿ.ಕೆ.ರವಿ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಸೇರಿ ಪತ್ರಕರ್ತರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**- ಜಾಹೀರಾತು ವ್ಯವಸ್ಥಾಪಕರು.**

# ಪ್ರೀತಿಯ ಅಮ್ಮ



ಸಿಲ್ಕ್ ಸಾರಿಗಳು ತುಂಬಾ ದುಬಾರಿ, ಅಷ್ಟಕ್ಕೂ ರೇಷ್ಮೆ ಸೀರೆಗಳನ್ನು ನಾನೇನು ಪ್ರತಿದಿನ ಬಳಸುತ್ತೀನ ಕಪಾಟಿನ ತುಂಬಾ ಉಡದೇ ಇರೋ ಅದೆಷ್ಟೋ ಸೀರೆಗಳು ಇವೆ. ರೇಷ್ಮೆ ಸೀರೆ ಬೇಡ ದೇವರಿಗೆ ಏರಿಸೋಕೆ ಒಂದು ಕಾಟನ್ ಸೀರೆ ತಗೋತೀನಿ ಸಾಕು.... ಇದು ಪ್ರತಿ ಹಬ್ಬದಲ್ಲೂ ನೀನು ಹೇಳುವ ಮಾತು. ದುಬಾರಿ ಕಪ್‌ಗಳು, ಡಿನ್ನರ್ ಸೆಟ್‌ಗಳು, ಹೊಸ ಬೆಡ್ ಶೀಟ್ಗಳು ಅತಿಥಿಗಳು ಬಂದಾಗ ಮಾತ್ರ.

ಹಬ್ಬ ಹರಿದಿನಗಳು ಬಂದಾಗ ಮನೆಯ ಸ್ವಚ್ಛತೆ, ಕಿಡಕಿ, ಬಾಗಿಲುಗಳ ಧೂಳನ್ನು ಒರೆಸುವುದು, ಕರ್ಟನ್ಗಳು ಮತ್ತು ಹಾಸಿಗೆಗಳನ್ನು ವಾಷಿಂಗ್ ಮಷೀನ್ ಗೆ ಹಾಕುವುದು, ನಂತರ ಹಬ್ಬಕ್ಕೆ ಬೇಕೆಂದು ಸಿಹಿ ಖಾರದ ತಿಂಡಿಗಳನ್ನು ಮಾಡಿ ಡಬ್ಬಕ್ಕೆ ತುಂಬಿ ಇಡುವುದು ಹೀಗೆ ಸದಾ ಕೆಲಸ ಎಂದು ಅಡುಗೆ ಮನೆಯನ್ನು ತಲೆಯ ಮೇಲೆ ಹೊತ್ತು, ಹೊತ್ತು ಹೊತ್ತಿಗೆ ಬಿಸಿಯಾದ ಅಡುಗೆ ಮಾಡಿ ಹಾಕುವುದು ಜೀವನ ಎಂಬಂತೆ ಆಡುತ್ತೀಯಲ್ಲ. ಏನನ್ನಾದರೂ ಖರೀದಿಸುವಾಗ ಹಣ ಸಾಲದೆ ಬಂದರೆ ಎಲ್ಲದಕ್ಕೂ ನೀನೇ ಮುಂದಾಗಿ ತ್ಯಾಗ ಮಾಡುವ ಮೂಲಕ ಹೊಂದಾಣಿಕೆ ಮಾಡುತ್ತೀಯಲ್ಲ. ಮನೆಯ ಎಲ್ಲರ ಅಗತ್ಯಗಳಿಗೂ ತಕ್ಕಂತೆ ನಿನ್ನನ್ನು ನೀನು ಬದಲಾಯಿಸಿಕೊಳ್ಳುತ್ತಾ ಕೊನೆಗೆ ಒಂದು ದಿನ ನಿನಗೇ ನೀನು ಗೊತ್ತಾಗದಷ್ಟು ಬದಲಾಗಿಬಿಡುವೆ ಎಂದು ಹಲವು ಬಾರಿ ಮನಸ್ಸಿಗೆ ತೋಚುತ್ತಿತ್ತು.

ನನ್ನಮ್ಮನಿಗೆ ಜೀವನವನ್ನು, ಅದರ ಸವಿಯನ್ನು ಸವಿಯಲು ಗೊತ್ತಿಲ್ಲ, ಮೋಜು ಮಾಡುವುದು ಸಂಭ್ರಮ ಪಡುವುದು ಗೊತ್ತೇ ಇಲ್ಲ ಎಂದು ನಾನಂದುಕೊಳ್ಳುತ್ತಿದ್ದೆ, ಆದರೆ ಇದೀಗ ನನ್ನದೇ ಜವಾಬ್ದಾರಿಗಳ ಭಾರದಲ್ಲಿ ಮೋಜು ಮಸ್ತಿಗಳು ಮರೆಯಾಗಿ ಹೋಗಿವೆ! ಹೀಗೇಕೆ? ಎಂಬುದರ ಅರಿವು ನನಗೀಗ ಆಗುತ್ತಿದೆ. ಅಡುಗೆ ಮನೆಯಲ್ಲಿ ಒಲೆಯ ಉರಿ ಅಡುಗೆಯನ್ನು ಬೇಯಿಸಿದರೆ, ಉರಿಯಲ್ಲದ ಝಳ ಮತ್ತು ಅಡುಗೆ ಮನೆಯ ಧಗೆಗೆ ನೀನು ಜೀವಂತ ಬೇಯುವೆ... ನಮಗಾಗಿ ರಸದೌತಣ ಬಡಿಸುವೆ ಆದರೂ ನಾನು ಬಂದು ಸಹಾಯ ಮಾಡುತ್ತಿರಲಿಲ್ಲ ನಿನಗೆ.... ಈಗ ಆ ಬಗ್ಗೆ ಖೇದವೆನಿಸುತ್ತದೆ ಅಮ್ಮ.

ಬಿಸಿಯಾದ ಡಬರಿಯನ್ನು ಗ್ಯಾಸ್ ಸ್ಟವ್ ಮೇಲಿಂದ ಕೆಳಗಿಳಿಸುವೆ ನೀ. ಕಾಯಲಿಟ್ಟ ಹಾಲು ಉಕ್ಕು ಬಂದದ್ದು ಅದು ಹೇಗೆ ನಿನಗೆ ಗೊತ್ತಾಗುತ್ತದೆಯೋ... ಹಾಲುಕ್ಕುವ ಮುನ್ನವೇ ಅಡುಗೆ ಮನೆಗೆ ಮರಳುವೆ. ಯಾವುದೋ ಒಂದು ದಿನ ಹಾಲು ಕಾಯಿಸಲು ಹೇಳಿದರೆ ಹಾಲು ಉಕ್ಕಿ ಅರ್ಧ ಪಾತ್ರೆಯಷ್ಟು ಹಾಲು ಚೆಲ್ಲಿದಾಗಲೇ ನಮಗೆ ಗೊತ್ತಾಗುತ್ತದೆ... ಇನ್ನು ನಾವ್ಯಾರು ಇಲ್ಲದಾಗ ಅಪ್ಪ, ಅಣ್ಣಹಾಲುಕಾಯಿಸಿದರಂತೂ ಪಾತ್ರೆ ಕರಟಿ ಹೋಗಿರುತ್ತದೆ... ನೀನು ಮಾತ್ರ ಒಂದು ದಿನವೂ ಉಕ್ಕಿಸದೆ ಹಾಲು ಕಾಯಿಸುವೆ ಎಂಬುದು ನಮಗೆಲ್ಲ ಸೋಜಿಗದ ಸಂಗತಿ. ಚಪಾತಿ, ರೊಟ್ಟಿ ಬೇಯಿಸುವಾಗ ಕೂಡ ಅದು ಹೇಗೆ ಬಿಸಿಯಾದ ಚಪಾತಿಯನ್ನು ಚುಚ್ಚುಗದ ಸಹಾಯವಿಲ್ಲದೆ ನೀನು ತಿರುಗಿಸಿ ಹಾಕುವೆಯೋ.... ನನಗೂ ಸ್ವಲ್ಪ ಆದರೆ ಗುಟ್ಟು ಹೇಳಿ ಕೊಡು ಅಮ್ಮ ಎಂದು ನಿನ್ನನ್ನು ಕೇಳುತ್ತಿದ್ದ ನಾನು ಈಗ ಸಂಸಾರದಲ್ಲಿ ಅದೆಲ್ಲವನ್ನು ಕಲಿತಿರುವೆ ಅಮ್ಮ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಅದು ಹೇಗೆ ತರಕಾರಿಯನ್ನು ಚಕಚಕನೆ ಹೆಚ್ಚಿದರೂ ಒಂದು ಬಾರಿಯೂ ಕೈ ಬೆರಳನ್ನು ಕುಯ್ದುಕೊಂಡಿಲ್ಲ, ಆಕಸ್ಮಿಕವಾಗಿ ಎಣ್ಣೆ ಸಿಡಿದು ಗಾಯವಾದರೂ ಕೆಲಸ ಮಾಡದೆ ನೀನು ಸುಮ್ಮನೆ ಕುಳಿತಿದ್ದು ನೋಡಿಯೇ ಇಲ್ಲ. ಮನೆಯವರೆಲ್ಲರ ಬೇಕು ಬೇಡಗಳನ್ನು ಪೂರೈಸುವ ನೀನು ಕೆಲವೊಮ್ಮೆ ಕೆಲಸದ ಒತ್ತಡದಿಂದ ಎಣ್ಣೆಯಲ್ಲಿ ಕಾಯ್ದ ಸಾಸಿವೆಯಂತೆ ಚಟಪಟ ಎನ್ನುವುದು ಉಂಟು.... ಆಗೆಲ್ಲ ನಾವು ಆಮೆ ತನ್ನ ಚಿಪ್ಪಿನಲ್ಲಿ ಅವಿತಿಟ್ಟುಕೊಳ್ಳುವಂತೆ ಮೌನದ ಚಿಪ್ಪೊಳಗೆ ನಮ್ಮನ್ನು ನಾವು ಬಂಧಿಸಿಕೊಳ್ಳುತ್ತಿದ್ದೆವು. ಈಗ ಗೃಹಿಣಿಯಾಗಿ ನಿನ್ನ ಒತ್ತಡದ ಅನುಭವದ ಕಾವು ನನಗೂ ತಟ್ಟುತ್ತಿದೆ ಅಮ್ಮ

ಸದಾ ನೀಟಾಗಿ ಸಮಯಕ್ಕೆ ಸರಿಯಾಗಿ ಇರುವಂತಹ ಸೀರೆ, ಚೂಡಿದಾರ್ ತೊಟ್ಟು ಮೆಲುನಗೆಯ ಆಭರಣವನ್ನು ಧರಿಸಿ ತಯಾರಾಗುತ್ತಿದ್ದ ನೀನು ಎಲ್ಲರನ್ನೂ ಎಲ್ಲವನ್ನು ಅದು ಹೇಗೆ ಪ್ರೀತಿಯಿಂದ ಮಾತನಾಡಿಸುತ್ತಿದ್ದೆ ಎಂಬುದು ಆಶ್ಚರ್ಯ. ದೊಡ್ಡವರಿಗೆ ಕೊಡಬೇಕಾದ ಗೌರವ, ವಾರಿಗೆಯವರೊಂದಿಗಿನ ವಿಶ್ವಾಸದ ಮಾತುಕತೆಗಳು, ನನ್ನ ಸ್ನೇಹಿತರೊಂದಿಗೆ ತೋರುತ್ತಿದ್ದ ಪ್ರೀತ್ಯಾದರಗಳು ಪುಟ್ಟ ಮಕ್ಕಳಿಗೆ ತೋರುತ್ತಿದ್ದ ಅಕ್ಕರೆ ಎಲ್ಲವೂ ನಿನ್ನ ವ್ಯಕ್ತಿತ್ವದಔನ್ನತ್ಯವನ್ನುತೋರುತ್ತಿದ್ದವು.ತುಸುದೊಡ್ಡವಳಾಗುತ್ತಿದ್ದಂತೆ ನಾನು ನಿನಗೆ ಆಧುನಿಕವಾಗಿ ಅಲಂಕರಿಸಲು ಮಾಡಿದ ಪ್ರಯತ್ನಗಳೆಲ್ಲವನ್ನು ನನ್ನ ಖುಷಿಗೆ ನೀನು ಒಪ್ಪಿದರೂ, ನಂತರ ಬೇಡವೆಂದು ನಯವಾಗಿ ಗದರಿ ಸುಮ್ಮನಾಗಿಸುತ್ತಿದ್ದೆ. ಹಾಗೆಲ್ಲ ನನ್ನಮ್ಮ ಔಟ್ ಡೇಟೆಡ್ ಎಂದು ನನಗನ್ನಿಸಿ ಜಗಳ ಕಾಯ್ದರೂ ಅಪ್ಪ, ಅಣ್ಣ ಇಬ್ಬರೂ ಅಮ್ಮನ ಬೆಂಬಲಕ್ಕೆ ನಿಲ್ಲುತ್ತಿದ್ದುದರಿಂದ ನಾನು ಸುಮ್ಮನಾಗುತ್ತಿದ್ದೆ. ಮನುಷ್ಯನಿಗೆ ಗೌರವ ಬರುವುದು ಆತನ ವ್ಯಕ್ತಿತ್ವದಿಂದಲೇ ಹೊರತು ಆತ ಧರಿಸುವ ಬಟ್ಟೆಗಳು ಮತ್ತು ಚಿನ್ನದ ಒಡವೆಗಳಿಂದಲ್ಲ ಎಂಬುದರ ಅರಿವು ನಿನ್ನ ಗೈರು ಹಾಜರಿಯಲ್ಲಿಯೂ ನಿನ್ನನ್ನು ಪ್ರೀತಿಸುವ ಮತ್ತು ಗೌರವಿಸುವ ಜನರನ್ನು ಕಂಡಾಗ ನನಗೆ ವೇದ್ಯವಾಗುತ್ತಿದೆ.

ಇದೀಗ ಆಟದಲ್ಲಿ ನನ್ನ ಸರದಿ .... ಮದುವೆಯಾಗಿ ಎರಡು ಮಕ್ಕಳ ತಾಯಿಯಾಗಿರುವ ನನಗೆ ಸದ್ಯಕ್ಕೆ ನಿನ್ನ ಜಾಗದ ಎಲ್ಲ ಅನುಭವದ ಅರಿವಾಗುತ್ತಿದೆ. ಹೆಣ್ಣು ಮಕ್ಕಳು ಮುಖದ ಸೌಂದರ್ಯ, ದೇಹದ ಮೈ ಮಾಟ, ಯೌವನ, ಅಲಂಕಾರ, ಹವ್ಯಾಸ, ಕಣ್ಣುಗಳಲ್ಲಿನ ಕಾಂತಿಯನ್ನು ಮನೆಯ ಕೆಲಸ ಕಾರ್ಯಗಳಲ್ಲಿ ಮತ್ತು ಕುಟುಂಬದ ಸದಸ್ಯರ ಬೇಕು ಬೇಡುಗಳನ್ನು ನೋಡಿಕೊಳ್ಳುವುದರಲ್ಲಿ ಕಳೆದುಕೊಳ್ಳುತ್ತಾರೆ ಎಂಬುದರ ಅರಿವಾದಾಗ ನಿನ್ನ ನೆನಪಾಗದೆ ಇರುವುದಿಲ್ಲ ಅಮ್ಮ. ತಲೆ ಸ್ನಾನ ಮಾಡಿ ತೊಯ್ದ ತಲೆಕೂದಲನ್ನು ಒಣಗಿಸದೆ, ಪೂಜೆ ಮಾಡಿ ಮನೆಯವರಿಗೆ ತಿಂಡಿ ಮಾಡಲು ಅಡುಗೆ ಮನೆಗೆ ಧಾವಿಸುವ ನಾನು ಥೇಟ್ ನಿನ್ನದೇ ಪ್ರತಿರೂಪವಾಗಿ ತೋರುವೆ ಅಮ್ಮ. ಮುಂಜಾನೆ ಬೇಗನೆ ಎದ್ದು ದೇವರಿಗೆ ಕೈ ಮುಗಿದು ಮನೆಯ ಕೆಲಸ ಪ್ರಾರಂಭಿಸುವ ನಾನು ನಿನ್ನದೇ ಸಂಸ್ಕಾರಗಳಲ್ಲಿ ಮುಂದುವರೆದಿದ್ದೇನೆ. ಪೂಜೆ- ಪುನಸ್ಕಾರ, ವ್ರತ-ಕಥೆ, ಹಿರಿಯರ ಸೇವೆ, ಮನೆಗೆ ಬರುವ ಅತಿಥಿಗಳ ಊಟ ಉಪಚಾರ ಎಂದು ಅಡುಗೆ ಮನೆ, ತಲ ಬಾಗಿಲು, ಹಿತ್ತಲು, ತರಕಾರಿ ಮತ್ತು ದಿನಸಿ ಅಂಗಡಿಗಳಿಗೆ ಎಡತಾಕುವ ನಾನು, ಈ ಹಿಂದೆ ನೀನು ಈ ಎಲ್ಲ ಕೆಲಸಗಳನ್ನು ಮಾಡುವಾಗ ಸುಳಿಯುತ್ತಿದ್ದ ಅಮ್ಮನಿಗೆ ದಣಿವಾಗೋಲ್ವೇ! ಎಂಬ ಪ್ರಶ್ನೆಗೆ ಇದೀಗ ಉತ್ತರ ಸಿಕ್ಕಿದೆ. ಮನೆಯ ಎಲ್ಲಾ ಕೆಲಸ ಕಾರ್ಯಗಳಲ್ಲಿ ಕುಟುಂಬದ ಎಲ್ಲರ ಬೇಕು ಬೇಡಗಳಲ್ಲಿ ನನ್ನ ವೈಯಕ್ತಿಕ ಆಶಯಗಳು ನಿಧಾನವಾಗಿ ಕಣ್ಮರೆಯಾಗುತ್ತಿವೆ. ಅಮ್ಮ..ಇದೀಗ ನಿನ್ನ ಕರ್ತವ್ಯ ಮತ್ತು ತ್ಯಾಗದ ಅರಿವಾಗುತ್ತಿದೆ ನನಗೆ.

ಅಷ್ಟೆಲ್ಲಾ ಕೆಲಸದ ಮಧ್ಯೆಯೂ ನನ್ನ ಮತ್ತು ಅಣ್ಣನ ಕಿರಿಕಿರಿಗಳನ್ನು, ಅಪ್ಪನ ಗೊಣಗಾಟವನ್ನು, ಅಜ್ಜ ಅಜ್ಜಿಯ ವಯೋ ಸಹಜ ತೊಂದರೆಗಳನ್ನು ಹಲವಷ್ಟು ಭಾರಿ ಮಾತಿಲ್ಲದೆ ಸಹಿಸಿ ಯಾವಾಗಲೋ ಒಮ್ಮೆ ಜ್ವಾಲಾಮುಖಿಯಂತೆ ಸಿಡಿಯುತ್ತಿದ್ದ ಭೂಮಿ ತೂಕದ ನಿನ್ನ ವ್ಯಕ್ತಿತ್ವದ ಆಳ, ಅಗಲ, ಹರವು ನನಗೀಗ ಅರ್ಥವಾಗುತ್ತಿದೆ ಅಮ್ಮ. ನನ್ನ ಮತ್ತು ಅಣ್ಣನ ವಿವಾಹವಾದ ನಂತರ ನಮ್ಮ ನಮ್ಮ ಕುಟುಂಬಗಳ ಹೊಣೆಗಾರಿಕೆಯನ್ನು ನಮನಮಗೆ ಬಿಟ್ಟು ಕೇವಲ ಸಲಹೆ ಸಹಕಾರಗಳನ್ನು ನೀಡುತ್ತಾ, ಮನೆಗೆಲಸಗಳಲ್ಲಿ ಸಹಾಯ ಮಾಡುತ್ತಾ ಇರುವ ನಿನ್ನನ್ನು ಕಂಡರೆ ಹೆಮ್ಮೆ ಆಗುತ್ತದೆ. ಆದರೂ ಒಂದು ಮಾತು ಹೇಳುವ ಆಸೆ ಅಮ್ಮ...

ನಿವೃತ್ತಿಯಾದ ಅಪ್ಪನ ಜೊತೆ ಜೊತೆಗೆ ಸ್ವಯಂ ನಿವೃತ್ತಿಯನ್ನು ತುಸುಮಟ್ಟಿಗೆ ಘೋಷಿಸಿ ಈಗಲಾದರೂ ಅಪ್ಪನ ಜೊತೆ ಪ್ರವಾಸ ಹೋಗು, ದೇಶಗಳನ್ನು ಸುತ್ತಾಡಿ, ತೀರ್ಥಕ್ಷೇತ್ರಗಳಿಗೆ ಭೇಟಿ ನೀಡಿ. ನಿಮ್ಮದೇ ವಯಸ್ಸಿನ ಸ್ನೇಹಿತರ ಜೊತೆಗೂಡಿ ವಿಹಾರ, ಮಾತುಕತೆಯಾಡಿ.ಒಳ್ಳೆಯ ಸಂಗೀತವನ್ನು ಆಲಿಸಿ, ಚಲನಚಿತ್ರಗಳನ್ನು ನೋಡಿ. ಮೊಮ್ಮಕ್ಕಳೊಂದಿಗೆ ನಿಮ್ಮ ಬಾಲ್ಯದ ಸವಿ ಘಟನೆಗಳನ್ನು ಹಂಚಿಕೊಳ್ಳಿ. ನಿಮ್ಮಿಷ್ಟದಂತೆ ಜೀವನ ನಡೆಸಿ. ಎಲ್ಲರಿಗೂ ಎಲ್ಲವನ್ನೂ ಮಾಡಿದ ನೀವು ನಿಮಗಾಗಿಯೂ ಜೀವಿಸಿ. ಅಮ್ಮ ಎಂದರೆ ಕೇವಲ ಪ್ರೀತಿ ಮತ್ತು ನಾವು ಕೇಳಿದ್ದನ್ನೆಲ್ಲ ಮಾಡಿ ಹಾಕುವ, ನಮ್ಮ ಬಟ್ಟೆಗಳನ್ನು ಒಗೆದು ಇಸ್ತ್ರಿ ಮಾಡುವ, ನಮ್ಮೆಲ್ಲಾ ಬೇಕು ಬೇಡಗಳನ್ನು ನೋಡಿಕೊಳ್ಳುವ, ಮಕ್ಕಳಲ್ಲಿ ಶಿಸ್ತು ಸಮಯಪ್ರಜ್ಞೆ ಆತ್ಮವಿಶ್ವಾಸವನ್ನು ಹುಟ್ಟಿಸುವ, ಅಪ್ಪನ ಸಿಟ್ಟು ಹಠಮಾರಿತನಗಳನ್ನು ಪ್ರೀತಿಯಷ್ಟೇ ಸಲೀಸಾಗಿ ಸ್ವೀಕರಿಸುವ ಸಹಿಸಿಕೊಳ್ಳುವ ಸಾಮಾನ್ಯ ಹೆಣ್ಣು ಮಗಳಂತೆ ತೋರುವ ಪ್ರತಿಯೊಬ್ಬ ಅಸಾಮಾನ್ಯ ತಾಯಿ ಅಲ್ವೇ?

ನಾವು ನಮ್ಮ ಬದುಕನ್ನು ಸರಿಯಾಗಿ ನಿರ್ವಹಿಸಲು ಆ ದೇವರು ನಮಗಾಗಿಯೇ ಕಳುಹಿಸಿರುವ ದೇವತೆ ತಾಯಿ. ನಮ್ಮೆಲ್ಲಾ ತಪ್ಪುಗಳನ್ನು ಸಹಿಸಿಕೊಂಡು, ನಮ್ಮನ್ನು ಸರಿಯಾದ ದಾರಿ ತೋರಿಸಿ ಬೆಳೆಸುವ ಗುರು ನಮ್ಮ ತಾಯಿ. ಹಾಗೆ ತಾಯಂದಿರೆಲ್ಲಾ ತಮ್ಮ ತಮ್ಮ ವೈಯಕ್ತಿಕತೆಯನ್ನು ಬದಿಗಿಟ್ಟು ಸಮಷ್ಟಿ ಪ್ರಜ್ಞೆಯಿಂದ ಕಾರ್ಯನಿರ್ವಹಿಸಿದ ಕಾರಣವೇ ಇಂದು ಅವರವರ ಮಕ್ಕಳು ಎಲ್ಲ ರಂಗದಲ್ಲೂ ಮುಂದೆ ಬರಲು ಕಾರಣವಾಗಿದೆ, ಅಲ್ಲವೇ? ಅಮ್ಮ.

ನಮ್ಮ ಸುಖ ಸಂತೋಷದಲ್ಲಿ ಖುಷಿಯನ್ನು ಕಾಣುವ ನಮ್ಮ ನೋವು ನಲಿವಿನಲ್ಲಿ ಪಾಲ್ಗೊಳ್ಳುವ, ಅದೆಷ್ಟೇ ಕಷ್ಟವಾದರೂ ನಮ್ಮ ಏಳಿಗೆಗೆ ದುಡಿಯುವ ಅಮ್ಮ.... ನಿನಗಾಗಿಯೂ ನೀನು ಬದುಕು. ನಿನಗೆ ಸಂತೋಷ ನೀಡುವ ಕೆಲಸಗಳನ್ನು ಮಾಡು, ನಿನ್ನ ಸಣ್ಣ ಪುಟ್ಟ ದೈಹಿಕ ತೊಂದರೆಗಳನ್ನು ದೊಡ್ಡದಾಗಲು ಬಿಡದೆ ನಿನ್ನ ಊಟ ತಿಂಡಿಯೆಡೆ ಗಮನ ಕೊಡು. ಆರೋಗ್ಯವನ್ನು ಕಾಯ್ದುಕೋ. ನೀನೇ ಹೇಳುವ ಹಾಗೆ ದೇವರು ಕೊಟ್ಟಿರುವ ಈ ಬದುಕನ್ನು "ಜಿಯೋ, ಜಿ ಭರ್ ಕೇ" ಎಂಬಂತೆ ಜೀವಿಸು. ಸದಾ ಸಂತೋಷವಾಗಿ ನೂರು ಕಾಲ ನಮ್ಮೊಂದಿಗೆ ನಗುನಗುತ್ತಾ ಇರು ಅಮ್ಮ. ನಿನ್ನ ಪ್ರೀತಿಯ ಮಗಳು

# ಪುಸ್ತಕ

■ ಚೇತನ ಭಾರ್ಗವ ಬೆಂಗಳೂರು

ಒಂದು ಪುಸ್ತಕ ನೂರು ಸ್ನೇಹಿತರಿಗೆ ಸಮ ಎನ್ನುವ ನಾಣ್ಣುಡಿಯಂತೆ ಪುಸ್ತಕ ಓದುವುದರಿಂದ ನಮಗೆ ಜ್ಞಾನ ವೃದ್ಧಿಯಾಗುತ್ತದೆ ಹಾಗೂ ನಮ್ಮ ಒಂಟಿತನವನ್ನು ಮರೆಸುತ್ತದೆ. ಪುಸ್ತಕಗಳು ಒಳ್ಳೆಯ ಸ್ನೇಹಿತ ಸ್ನೇಹಿತೆ ಇದ್ದಂತೆ. ನಮ್ಮ ದೇಶದ ಸಂಸ್ಕೃತಿ ಚರಿತ್ರೆ ಇತಿಹಾಸವನ್ನು ಮುಂದಿನ ಪೀಳಿಗೆಗೆ ರವಾನಿಸುವ ಸಾಧನವಾಗಿದೆ. ಪುಸ್ತಕ ಓದುವುದರಿಂದ ಕಲ್ಪನಾ ಶಕ್ತಿ ಹೆಚ್ಚುತ್ತದೆ. ಪುಸ್ತಕಗಳು ಪುರಾಣದ ಕಥೆ ಹಾಗೂ ಪುರಾತನ ಜೀವನ ಕ್ರಮಗಳ ಬಗ್ಗೆ ಅರಿವು ಮೂಡಿಸುತ್ತದೆ.



ಕೆಲವು ಪುಸ್ತಕಗಳು ನಮ್ಮ ಜೀವನದ ದಿಕ್ಕನ್ನೇ ಬದಲಿಸುತ್ತದೆ. ಅದರಲ್ಲಿರುವ ವಿಷಯಗಳು ಓದುಗನಿಗೆ ಸ್ಪೂರ್ತಿಯಾಗಿ ಅವನ ಯೋಚನಾ ಲಹರಿ ಮನೋಭಾವನೆಯನ್ನು ಬದಲಿಸುತ್ತದೆ. ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದಿದಾಗ ನಮ್ಮ ಜ್ಞಾನ ಶಕ್ತಿ ಬೆಳೆಯುತ್ತದೆ ಮೊದ ಮೊದಲು ಪುಸ್ತಕ ಓದುವುದು ಹವ್ಯಾಸವಾಗಿದ್ದರೆ ನಂತರ ಅದು ನಮ್ಮ ಜೀವನದ ಭಾಗವಾಗಿ ಮಾರ್ಪಾಡಾಗುತ್ತದೆ.

ನಮ್ಮ ಮನಸ್ಸಿನ ದುಗುಡ ಹತಾಶೆ ಇವೆಲ್ಲವೂ ಪುಸ್ತಕ ಓದುವುದರಿಂದ ದೂರವಾಗಿ ಸಕಾರಾತ್ಮಕ ಭಾವನೆಗಳು ನಮ್ಮಲ್ಲಿ ಮೂಡುತ್ತವೆ. ಜನರಲ್ಲಿ ಪುಸ್ತಕ ಓದುವ ಅಭಿರುಚಿ ಹಾಗೂ ಹವ್ಯಾಸವನ್ನು ಹೆಚ್ಚಿಸುವ ದೃಷ್ಟಿಯಿಂದ ಮತ್ತು ಲೇಖಕರಿಗೆ ಗೌರವ ಸಲ್ಲಿಸುವ ಸಲುವಾಗಿ ಹಾಗೂ ಉದಯೋನ್ಮುಖ ಬರಹಗಾರರಿಗೆ ಪ್ರೋತ್ಸಾಹಿಸುವ ದೃಷ್ಟಿಯಿಂದ 1995ರಲ್ಲಿ ಯುನೆಸ್ಕೋ ಏಪ್ರಿಲ್ 23 ರಂದು ವಿಶ್ವ ಪುಸ್ತಕ ಹಾಗೂ ಕೃತಿಸ್ವಾಮ್ಯದ ದಿನ ಎಂದು ಘೋಷಿಸಿದೆ.

ಆದರೆ ಇಂದಿನ ಆಧುನಿಕ ಯುಗದಲ್ಲಿ ಮೊಬೈಲ್ ಹಾಗೂ ಎಲೆಕ್ಟ್ರಾನಿಕ್ ಪರಿಕರಗಳ ಬಳಕೆಯಿಂದಾಗಿ ಪುಸ್ತಕ ಓದುಗರ ಸಂಖ್ಯೆ ಕಡಿಮೆಯಾಗಿದೆ. ಹಿಂದೆ ಮಾಹಿತಿ ಸಂಗ್ರಹಣೆಗಾಗಿ ಪುಸ್ತಕವನ್ನು ಓದುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಯಾವುದೇ ವಿಷಯದ ಬಗ್ಗೆ ಮಾಹಿತಿ ಬೇಕಾದರೆ ಮೊಬೈಲ್ ಕಿಲಿಮಣೆಯಲ್ಲಿ ಟೈಪಿಸಿದರೆ ಸಾಕು. ಆದರೆ ವಿಷಯದ ಅವಗಾಹನೆ ಆಳ ಹಾಗೂ ಅದರ ಮಿತಿ ಪುಸ್ತಕ ಓದಿದರೇನೇ ತಿಳಿಯುತ್ತದೆ. ಅಂತರ್ಜಾಲದ ಮಾಹಿತಿಯಿಂದ ಯಾವುದೇ ವಿಷಯದ ಮೇಲ್ಸ್ತರ ತಿಳಿಯಬಹುದೇ ಹೊರತು ತಳಸ್ಪರ್ಶಿ ಅಧ್ಯಯನ ಪುಸ್ತಕಗಳ ಓದಿನಿಂದಲೇ ಸಾಧ್ಯ.

ಪುಸ್ತಕವು ನಮಗೆ ವಿಜ್ಞಾನ ತಂತ್ರಜ್ಞಾನದ ರಾಜಕೀಯ ಸಾಮಾಜಿಕ ಆರ್ಥಿಕ ವ್ಯವಸ್ಥೆಯ ಬಗ್ಗೆ ತಿಳುವಳಿಕೆ ಮೂಡಿಸುತ್ತದೆ. ನಮ್ಮ ನೆಚ್ಚಿನ ಲೇಖಕ ಲೇಖಕಿಯ ಪುಸ್ತಕವನ್ನು ಓದುತ್ತಿದ್ದರೆ ಸಿಗುವ ಸಂತೋಷ ವರ್ಣನಾತೀತ.

ಚಿಕ್ಕ ಮಕ್ಕಳಿಗೆ ಮೊಬೈಲ್ ತೋರಿಸುವ ಬದಲು ಚಿತ್ರ ಸಮೇತ ಇರುವ ಪುಸ್ತಕವನ್ನು ತೋರಿಸುತ್ತಾ ಕಥೆಗಳನ್ನು ಹೇಳಿ ಪುಸ್ತಕ ಓದುವ ಹವ್ಯಾಸವನ್ನು ಬೆಳೆಸಬೇಕು. ಪುಸ್ತಕಗಳ ಓದು ನಮ್ಮ ಭಾಷಾ ಸಂಪತ್ತನ್ನು ಹೆಚ್ಚಿಸುವುದಲ್ಲದೆ ನಮಗೆ ಆತ್ಮವಿಶ್ವಾಸವನ್ನು ಮೂಡಿಸುತ್ತದೆ. ಹಣ ಸಂಪತ್ತನ್ನು ನಾವು ಕಳೆದುಕೊಳ್ಳಬಹುದು ಆದರೆ ವಿದ್ಯೆ ಹಾಗೂ ನಾವು ಸಂಪಾದಿಸಿದ ಜ್ಞಾನವನ್ನು ಯಾರೂ ಕಸಿದುಕೊಳ್ಳಲಾರರು.

ಆದ್ದರಿಂದಲೇ ಪರಂಪರೆಯಿಂದ ಪುಸ್ತಕವನ್ನು ನಾವು ವಿದ್ಯಾಧಿ ದೇವತೆಯಾದ ಸರಸ್ವತಿ ಎಂದೇ ಪೂಜಿಸುತ್ತೇವೆ. ಪುಸ್ತಕಗಳ ಸ್ಥಾನ



ನಾವು ಗುರು ಹಾಗೂ ದೇವತೆಗಳ ಸ್ಥಾನಮಾನಕ್ಕೆ ಸಮನಾಗಿ ನೀಡಿದ್ದೇವೆ. ಪುಸ್ತಕಗಳನ್ನು ಕೈ ಮುಟ್ಟಿ ಕಣ್ಣಿಗೆ ಹೊತ್ತಿಕೊಂಡು ನಮಸ್ಕರಿಸುವ ಪರಿಪಾಠವನ್ನು ಇಟ್ಟುಕೊಂಡಿದ್ದೇವೆ. ಆ ಮಟ್ಟಿಗೆ ಪುಸ್ತಕವು ನಮಗೆ ಪೂಜ್ಯನೀಯವಾಗಿದೆ

ಪುಸ್ತಕದಿಂದಲೇ ಮಸ್ತಕ ಬೆಳಗುತ್ತದೆ. ಮಸ್ತಕ ಬೆಳಗಾದರೆ ಜೀವನವು ಸರಾಗವಾಗುತ್ತದೆ. ಬರಿಯ ಪುಸ್ತಕ ಓದಿ ಆ ವಿಚಾರ ಗಳನ್ನು ಮರೆತರೆ ಆಗುವುದಿಲ್ಲ ಅದನ್ನು ಜನಜೀವನದಲ್ಲಿ ರೂಢಿಸಿ ಕೊಳ್ಳಬೇಕು ಆಗ ಬದುಕು ಹಸನಾಗುತ್ತದೆ. ಹಾಗಾಗಿ ಪುಸ್ತಕವನ್ನು ಓದೋಣ ವಿಚಾರಗಳನ್ನು ರೂಢಿಸಿಕೊಂಡು ಬೆಳೆಯೋಣ.

## ಕವಿ ಮನಸು

### ಮರಳಿ ಗೂಡಿಗೆ



ನಾಡಿನ ಜನರು ಕಾಡಿಗೆ ಹೊರಟರು
ವನ ವಿಹಾರ ಮಾಡಲೆಂದು
ಕಾಡಿನ ಪ್ರಾಣಿಗಳೆಲ್ಲ ಪೇರಿ ಕಿತ್ತರು
ನಾಡಿನ ಜನಗಳನ ಕಂಡು

ಕೈಯಲಿ ಕೋವಿ ಹೆಗಲಲಿ ಕೊಡಲಿ
ಇದು ಮನುಜನ ವಿಹಾರ
ಇವುಗಳ ನೋಡಿ ಮುಗ್ದ ಪ್ರಾಣಿಗಳ
ಪ್ರಾಣಕೆ ಬಂತೇ ಸಂಚಕಾರ

ಓರೆ ಕಣ್ಣಲಿ ಬೆರಗಿನ ನೋಟದಿ
ಹೋರಟ ಪ್ರಾಣಿಗಳೇ ಅಂದ
ಎಲ್ಲಿ ಹೋದರೂ ಬಿಡದಾ ಮನುಜಗೆ
ದೇವರೇ ಹಿಡಿ ಶಾಪವ ಹಾಕೆಂದ

ಎಷ್ಟು ಬಲಶಾಲಿಯಾದರೆ ಏನು
ಮೃಗಗಳಿಗೆ ಹೆದರಿಕೆಯು
ದುಷ್ಟ ಮನುಜನ ಅಟ್ಟಹಾಸಕೆ
ಹೆದರಿ ಓಡುತಿರುವವೇನು

ಕವಿ ಮನದಲಿ ಬಂತದು ಯೋಚನೆ
ಹೀಗಾದರೆ ಹೇಗೆ
ಕಾಡೇ ನಾಡು ನಾಡೇ ಕಾಡು ಆದರೆ
ಜಗ ಮುಂಚಿನಂತಾಗುವುದೇ

ನಾಡಲಿ ಗಿಡ ಮರಗಳೇ ಇಲ್ಲ
ಪ್ರಾಣಿಗಳ ಬದುಕು ಹೇಗೆ
ನಮ್ಮಯ ಕಾಡು ನಮಗೆ ಇರಲಿ
ಮರಳಿ ಬಂದವು ಗೂಡಿಗೆ

– ಕೆ ಎಂ ಬಸವರಾಜ ಹೊಸಪೇಟೆ

### ಶ್ಲಾಘನೀಯ ಕಾರ್ಯ

ಹಳೆಯದು ಕಟ್ಟಡ ಬಳಿಯಲಿ ಗಿಡಮರ
ಸುಳಿಯುವ ಪಕ್ಷಿ ಸಂಕುಲವು
ಮಳೆಯನು ಬಿಸಿಲನು ಚಳಿಯನು
ತಡೆಯಲು
ಚೆಲುವಿನ ಗೂಡು ಕಟ್ಟಿದವು

ಒಲವಲಿ ಕೂಡಿದ ಬಳುವಳಿ ಮೊಟ್ಟೆಗೆ
ಕುಳಿತವು ಕಾವು ನೀಡಿದವು
ಕೆಲವೇ ದಿನದಲಿ ಚಿಲಿಪಿಲಿ ಸದ್ಧದು
ಉಲಿಯುತಲಿದ್ದ ಮರಿಗಳವು

ಕೊಡಲಿಯ ತಂದರು ಕಡಿದರು ವೃಕ್ಷವ
ಬಿಡದಿಹ ಸ್ವಾರ್ಥ ಮನುಜನಿಗೆ
ಹಡೆದಿಹ ಹಕ್ಕಿಯ ಒಡಲಲಿ ವೇದನೆ
ಚಡಪಡಿಸುತ್ತ ಮನದೊಳಗೆ

ತರುಣನು ಕಂಡನು ಮರುಕವ ಪಟ್ಟನು
ಕರುಣದಿ ಹಿಡಿದು ಮರಿಗಳನು
ನೆರವನು ನೀಡಲು ಕರೆದನು ತಕ್ಷಣ
ಮರೆಯದೆ ತನ್ನ ಗೆಳೆಯನನು

ಮೀರಿದ ದಯೆಯನು ತೋರಿದ ತರುಣನು
ಸೂರಿಗೆ ಬಿಗಿದ ಗೂಡನ್ನು
ಬೇರೆಯೆ ಜಾಗದ ದಾರಿಯನರಸುತ
ಹಾರುತ ಬಂತು ಮಾತೆಯದು

ಮರೆಯಲಿ ಇದ್ದಿಹ ಮರಿಗಳು ಬಲಿತವು
ಹರುಷದಿ ಮೇಲೆ ಹಾರಿದವು
ಪರಿಸರ ಪ್ರೇಮದ ತರುಣನು ಮಾಡಿದ
ಕರುಣೆಯ ಕಾರ್ಯ ಫಲಿಸಿದವು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

ಉಚಿತ-ಖಚಿತ!
ಪತ್ರಿಕೆಯ ಓದು ಕಣ್ಣಿಗೆ ಹಿತ, ಮೊಬೈಲ್ ಓದು ಉಚಿತ, ಕಣ್ಣಿಗೆ ಹಾನಿ ಖಚಿತ!
ಮಕ್ಕಳ ಕೈಗೆ ಮೊಬೈಲ್ ಬದಲಿಗೆ, ಪತ್ರಿಕೆ ನೀಡಿ ಬದಲಾವಣೆ ಕಾಣಿರಿ...
ಸ್ಥಳೀಯ ಸುದ್ದಿಗಳಿಗಾಗಿ ಹಂಪಿ ಟೈಮ್ಸ್ ಪತ್ರಿಕೆ ಓದಿರಿ
ಹಂಪಿ ಟೈಮ್ಸ್ ಬಳಗದ ಕಳಕಳಿ
ಬೆಲೆ ರೂ 2

# ಕಪ್ಪುರಂಧ್ರ ಸೌರವ್ಯೂಹ ಪ್ರವೇಶಿಸಿದರೆ...

ನಮ್ಮ ಸೂರ್ಯ ಸುಂದರವಾದ ಮತ್ತು ಬೃಹತ್ ಸಂಖ್ಯೆಯ ಪರಿವಾರ ಹೊಂದಿದ್ದಾನೆ. ಅದರಲ್ಲಿ ಎಂಟು ಗ್ರಹಗಳು, ನೂರಾರು ಉಪಗ್ರಹಗಳು, ಸಾವಿರಾರು ಕ್ಷುದ್ರಗ್ರಹಗಳು, ಶತಕೋಟಿ ಧೂಮಕೇತುಗಳು ಸೇರಿವೆ. ಇಂತಹ ಬೃಹತ್ ಸಂಖ್ಯೆಯ ಪರಿವಾರಕ್ಕೆ ಕಪ್ಪುರಂಧ್ರವೆಂಬ ಅನಪೇಕ್ಷಿತ ಅತಿಥಿ ಬಂದರೆ ಏನಾಗುತ್ತೇ? ಇಷ್ಟೊಂದು ಸಂಖ್ಯೆಯ ಪರಿವಾರ ಇರುವಾಗ ಒಬ್ಬ ಅತಿಥಿ ಬಂದರೆ ತೊಂದರೆ ಏನು? ಎಂಬ ಪ್ರಶ್ನೆ ಮೂಡದಿರದು. ಹಾಗಾದರೆ ಕಪ್ಪುರಂಧ್ರ ಎಂದರೇನು? ಅದರಿಂದ ಆಗುವ ಪರಿಣಾಮಗಳೇನು ಕುರಿತ ಮಾಹಿತಿಗಾಗಿ ಮುಂದೆ ಓದಿ.

**ಕಪ್ಪುರಂಧ್ರ ಎಂದರೆ....:** ಕಪ್ಪುರಂಧ್ರಗಳನ್ನು ಕಪ್ಪುಕುಳಿ ಎಂದೂ ಸಹ ಕರೆಯಲಾಗುತ್ತದೆ. ಕಪ್ಪುರಂಧ್ರಗಳು ಎಂದರೆ ನಿಖರವಾಗಿ ರಂಧ್ರಗಳಲ್ಲ. ಇದು ಬಾಹ್ಯಾಕಾಶದ ಒಂದು ಸ್ಥಳವಾಗಿದೆ. ಇಲ್ಲಿ ಗುರುತ್ವಾಕರ್ಷಣೆ ಹೆಚ್ಚಾಗಿದ್ದು, ಎಲ್ಲವನ್ನು ತನ್ನ ಕೇಂದ್ರಕ್ಕೆ ಸೆಳೆದುಕೊಳ್ಳುತ್ತದೆ. ಇಲ್ಲಿ ಬೆಳಕು ಹೊರಬರುವುದೇ ಇಲ್ಲ. ಸಂಪೂರ್ಣ ಕತ್ತಲು ಆವರಿಸಿರುತ್ತದೆ. ನಕ್ಷತ್ರಗಳು ಸಾಯುವಾಗ ಇದು ಸಂಭವಿಸುತ್ತದೆ. ಇಲ್ಲಿ ಬೆಳಕು ಹೊರಬರದ ಕಾರಣ ಇದನ್ನು ಕಪ್ಪುಕುಳಿ ಅಥವಾ ಕಪ್ಪುರಂಧ್ರ ಎನ್ನುತ್ತಾರೆ. ಕಪ್ಪುಕುಳಿಗಳನ್ನು ಬರಿ ಕಣ್ಣಿನಿಂದ ನೋಡಲಾಗುವುದಿಲ್ಲ. ಬಾಹ್ಯಾಕಾಶದ ದೂರದರ್ಶಕಗಳಿಂದ ಮಾತ್ರ ನೋಡಲು ಸಾಧ್ಯ.

ಕಪ್ಪುರಂದ್ರಗಳ ಬಗ್ಗೆ ಮೊದಲ ಮಾಹಿತಿ ನೀಡಿದವರು ಐನ್‌ಸ್ಟೀನ್. ಕೇವಲ ಸಾಪೇಕ್ಷ ಸಾಂದ್ರತೆ ಸಿದ್ದಾಂತದ ಲೆಕ್ಕಾಚಾರದಿಂದಲೇ ಕಪ್ಪುರಂದ್ರಗಳ ಸುಳಿವನ್ನು ನೀಡಿದ್ದರು. ನಂತರ ಕಪ್ಪುರಂದ್ರಗಳ ಬಗ್ಗೆ ಅತೀ ಹೆಚ್ಚು ಸಂಶೋಧನೆಗಳಲ್ಲಿ ತೊಡಗಿದ ಖಭೌತವಿಜ್ಞಾನಿ ಎಂದರೆ ಸ್ಟೀಫನ್ ಹಾಕಿನ್ಸ್. ಐನ್‌ಸ್ಟೀನ್ ನೀಡಿದ ಮಾಹಿತಿಗೆ ಪುರಾವೆ ಸಮೇತ ಕಪ್ಪುರಂದ್ರಗಳ ಬಗ್ಗೆ ಹಾಕಿನ್ಸ್ ತನ್ನ ವಾದವನ್ನು ಜಗತ್ತಿಗೆ ತಿಳಿಸಿದ. 10–04–2019 ಕಪ್ಪುರಂದ್ರಗಳ ಕುರಿತ ಮಹತ್ವದ ದಿನ. ಅಂದು ನಾಸಾ ಮೆಸ್ಸಿಯರ್–87 ನಕ್ಷತ್ರಪುಂಜದ ಕೇಂದ್ರಭಾಗದಲ್ಲಿನ ಕಪ್ಪುರಂದ್ರದ ಚಿತ್ರವನ್ನು ಬಿಡುಗಡೆ ಮಾಡಿತ್ತು. ಮೆಸ್ಸಿಯರ್–87 ನಕ್ಷತ್ರಪುಂಜವು ಭೂಮಿಯಿಂದ 53.5 ದಶಲಕ್ಷ ಬೆಳಕಿನವರ್ಷದಷ್ಟು ದೂರದಲ್ಲಿದೆ ಎಂದು ಲೆಕ್ಕಾಚಾರ ಹಾಕಲಾಗಿದೆ. ಇದರ ಜೊತೆಗೆ ಸ್ಯಾಗಿಟ್ಯಾರಿಯನ್–ಎ* ಎಂಬ ಇನ್ನೊಂದು ನಕ್ಷತ್ರಪುಂಜದಲ್ಲೂ ಕಪ್ಪುಕುಳಿ ಇರುವುದು ಕಂಡುಬಂದಿದೆ. ಇದು ಭೂಮಿಯಿಂದ ಕೇವಲ 26000 ಬೆಳಕಿನ ವರ್ಷಗಳಷ್ಟು ದೂರದಲ್ಲಿದೆ ಎಂದು ಹೇಳಲಾಗಿದೆ. (ಒಂದು ಸೆಕೆಂಡಿಗೆ ಮೂರು ಲಕ್ಷ ಕಿ.ಮೀ ವೇಗದಲ್ಲಿ ಚಲಿಸುವ ಬೆಳಕು ಸತತವಾಗಿ ಒಂದು ವರ್ಷ ಚಲಿಸಿದರೆ ತಲುಪುವ ದೂರವೇ ಒಂದು ಬೆಳಕಿನ ವರ್ಷ) ಏಪ್ರಿಲ್ 2017ರಿಂದ 200ಕ್ಕೂ ಹೆಚ್ಚು ವಿಜ್ಞಾನಿಗಳು ಈ ಸಂಶೋಧನಾ ಕಾರ್ಯದಲ್ಲಿ ಭಾಗಿಯಾಗಿದ್ದರು. ಅವರು ಹವಾಯಿ, ಚಿಲಿ, ಅರಿಜೋನಾ, ಸ್ಪೇನ್, ಮೇಕ್ಸಿಕೋ ಮತ್ತು ದಕ್ಷಿಣ ಧ್ರುವ ಪ್ರದೇಶಗಳಲ್ಲಿ ಎಂಟು ರೇಡಿಯೋ ಟೆಲಿಸ್ಕೋಪ್‌ಗಳನ್ನು ಬಳಸಿ ಕಪ್ಪುರಂದ್ರ ಕುರಿತ ಸಂಶೋಧನೆ ಮಾಡಿದ್ದರು. ಈ ಚಿತ್ರದಿಂದ ಜಗತ್ತಿನ ಖಗೋಳ ವಲಯದಲ್ಲೊಂದು ಬಿಸಿ ಬಿಸಿ ಚರ್ಚೆ ಪುನಃ ಪ್ರಾರಂಭವಾಗಿದೆ.




**ಗಾತ್ರ ಎಷ್ಟು? :** ಕಪ್ಪುಕುಳಿಗಳ ಗಾತ್ರದಲ್ಲಿ ವ್ಯತ್ಯಾಸಗಳಿವೆ. ಕೆಲವು ಪರಮಾಣುವಿನಷ್ಟು ಚಿಕ್ಕದಾಗಿದ್ದರೆ ಕೆಲವು ಸೂರ್ಯನಿಗಿಂತ 20 ಪಟ್ಟು ದೊಡ್ಡದಾಗಿವೆ. ಕಪ್ಪುಕುಳಿಗಳು ಗಾತ್ರದಲ್ಲಿ ಚಿಕ್ಕದಾಗಿದ್ದರೂ ಸಹ ಪರ್ವತದಷ್ಟು ದ್ರವ್ಯರಾಶಿ ಹೊಂದಿರುತ್ತವೆ. ಮೆಸ್ಸಿಯರ್–87 ಕಪ್ಪುರಂದ್ರವು ಭೂಮಿಗಿಂತ 30 ಲಕ್ಷ ಪಟ್ಟು ಅಗಲವಿದೆ. ಇದರ ತೂಕ ಸೂರ್ಯನಿಗಿಂತ 650ಕೋಟಿ ಪಟ್ಟು ಹೆಚ್ಚು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ. ನಮ್ಮ ಆಕಾಶಗಂಗೆ ಗೆಲಾಕ್ಸಿಯಲ್ಲಿ ಅನೇಕ ಕಪ್ಪುಕುಳಿಗಳು ಇರಬಹುದು ಎಂದು ವಿಜ್ಞಾನಿಗಳು ಹೇಳಿದ್ದಾರೆ.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Hampi Times E-paper
SCAN AND READ

**ಸೌರವ್ಯೂಹಕ್ಕೆ ಸಮೀಪಿಸಿದರೆ ಏನಾಗುತ್ತೇ? :** ಇಂತಹ ಅಗಾಧ ಶಕ್ತಿಯುತವಾದ ಕಪ್ಪುಕುಳಿಗಳು ನಮ್ಮ ಸೌರವ್ಯೂಹವನ್ನು ಸಮೀಪಿಸಿದರೆ ಏನಾಗುತ್ತದೆ? ಎಂಬುದೇ ಎಲ್ಲರನ್ನು ಕಾಡುವ ಪ್ರಶ್ನೆ. ಏನಾಗುತ್ತದೆ ಎನ್ನುವುದು ಕಪ್ಪುಕುಳಿಯ ಗಾತ್ರ ಹಾಗೂ ಅದು ಸೌರವ್ಯೂಹದಿಂದ ಎಷ್ಟು ದೂರದಲ್ಲಿ ಹಾದುಹೋಗುತ್ತದೆ ಎಂಬುದನ್ನು ಅವಲಂಬಿಸಿದೆ. ದೊಡ್ಡಗಾತ್ರದ ಕಪ್ಪುಕುಳಿ ನಮ್ಮ ಸೌರವ್ಯೂಹಕ್ಕೆ ಪ್ರವೇಶಿಸಿದರೆ ನಾವು ಬದುಕಿ ಉಳಿಯುವ ಅವಕಾಶಗಳು ತೀರಾ ಕಡಿಮೆ.

ಕಪ್ಪುಕುಳಿಗಳು ಕೆಲವೇ ಬೆಳಕಿನ ವರ್ಷಗಳ ದೂರದಲ್ಲಿ ಹೋದರೂ ಸಹ ಸೌರವ್ಯೂಹಕ್ಕೆ ಭೌತಿಕ ತೊಂದರೆಗಳು ಉಂಟಾಗುತ್ತವೆ. ಸಂಭಾವ್ಯವಾಗಿ ನಕ್ಷತ್ರಗಳು, ಗ್ರಹಗಳು, ಕ್ಷುದ್ರಗ್ರಹಗಳು ಮತ್ತು ಧೂಮಕೇತುಗಳು ಕಪ್ಪುಕುಳಿಗಳನ್ನು ಸುತ್ತುತ್ತಿರುತ್ತವೆ. ಇವೆಲ್ಲವನ್ನೂ ಒಂದೇ ಉಸಿರಿಗೆ ಸ್ವಾಹ ಮಾಡುವಷ್ಟು ಗುರುತ್ವಾಕರ್ಷಣ ಶಕ್ತಿ ಈ ಕಪ್ಪುಕುಳಿಗಳಿಗೆ ಇದೆ.

ಕಪ್ಪುಕುಳಿಗಳು ಸೌರವ್ಯೂಹದ ಹೊರಗಿನ ಊರ್ಟ್ ಮೋಡದಲ್ಲಿ ಗುರುತ್ವವಾದ ಅವಸ್ಥೆಯನ್ನು ಉಂಟು ಮಾಡುತ್ತವೆ. ಕಪ್ಪುಕುಳಿಯು ದೂಮಕೇತು ಮತ್ತು ಕ್ಷುದ್ರಗ್ರಹಗಳನ್ನು ಸೌರವ್ಯೂಹದಲ್ಲಿ ತರಗೆಲೆಯಂತೆ ಹಾರಾಡಿಸಬಹುದು. ಇದರಿಂದ ಅವು ಪರಸ್ಪರ ಗ್ರಹಗಳಿಗೆ ಢಿಕ್ಕಿ ಹೊಡೆಯುತ್ತವೆ. ಭೂಮಿಗೂ ಇವು ಅಪ್ಪಳಿಸಬಹುದು. ಕಪ್ಪುಕುಳಿಗಳು ಸೌರವ್ಯೂಹದ ಸಮೀಪ ಹಾದುಹೋದರೆ ಗ್ರಹಗಳ ಕಕ್ಷೆಗಳು ಬದಲಾಗುತ್ತವೆ.

ಸಂಭಾವ್ಯವಾಗಿ ಕಪ್ಪುಕುಳಿ ನಮ್ಮ ಸೌರವ್ಯೂಹ ಪ್ರವೇಶಿಸಿದರೆ, ಗುರುಗ್ರಹಕ್ಕೆ ಅತೀ ಹೆಚ್ಚು ಅನಾಹುತ ಆಗುತ್ತದೆ. ಅದು ಗುರುಗ್ರಹದಲ್ಲಿರುವ ಎಲ್ಲಾ ಅನಿಲವನ್ನು ತನ್ನೆಡೆಗೆ ಎಳೆದುಕೊಳ್ಳುತ್ತದೆ. ಆಗ ಗುರುಗ್ರಹ ಕೇಲವ ಸುತ್ತುವ ಚಕ್ರದಂತೆ ಪರಿವರ್ತನೆ ಹೊಂದುತ್ತದೆ. ದೈತ್ಯಗ್ರಹ ಎನಿಸಿದ ಗುರುಗ್ರಹದ ಕಥೆ ಈ ರೀತಿಯಾದರೆ ಇನ್ನು ಭೂಮಿಯ ಪಾಡೇನು?.

ಉತ್ತರ ಭಯಾನಕವಾಗಿರುತ್ತದೆ. ಕಪ್ಪುಕುಳಿಗಳು ಪ್ಲೂಟೋದ ಬಳಿ ಬರುತ್ತಿದ್ದಂತೆ ಭೂಮಿಯ ಮೇಲೆ ಪರಿಣಾಮ ಬೀರುತ್ತದೆ. ಅದು ನಮ್ಮ ವಾಸಯೋಗ್ಯ ವಲಯದಿಂದ ನಮ್ಮನ್ನು ಎಳೆದು ಹಾಕುತ್ತದೆ. ಈ ಬದಲಾವಣೆಗೆ ಹೊಂದಿಕೊಳ್ಳಲು ನಾವು ಸಿದ್ದರಾಗಿಲ್ಲ. ಇದರಿಂದ ತಪ್ಪಿಸಿಕೊಳ್ಳಲು ಸಾಕಷ್ಟು ಸಮಯ ನಮ್ಮ ಬಳಿ ಇರುವುದಿಲ್ಲ. ಕಪ್ಪುಕುಳಿ ಭೂಮಿಯನ್ನು ಸಮೀಪಿಸುತ್ತಿದ್ದಂತೆ ಅದು ಭೂಗ್ರಹದ ಹೊರಪದರದಲ್ಲಿ ಬಿರುಕುಗಳನ್ನು ಉಂಟುಮಾಡುತ್ತದೆ. ಇದರಿಂದ ತೀವ್ರವಾದ ಭೂಕಂಪ ಮತ್ತು ಜ್ವಾಲಾಮುಖಿಗಳು ಉಂಟಾಗುತ್ತವೆ. ಸಮುದ್ರದ ಅಲೆಗಳೂ ಸಹ ನಾಶವಾಗುತ್ತವೆ. ಕಪ್ಪುಕುಳಿ ಭೂ ಕಕ್ಷೆಯನ್ನು ಹಾದು ಹೋಗುವ ವೇಳೆಗೆ ಭೂಗ್ರಹದಲ್ಲಿ ಏನೂ ಉಳಿದಿರುವುದಿಲ್ಲ. ಶೀಲೀಂದ್ರಗಳೂ ಸಹ ಶಿಲಾಪಾಕದಿಂದ ಆವರಿಸಿಕೊಳ್ಳುತ್ತವೆ.

ಕಪ್ಪುಕುಳಿಯ ಅನಾಹುತದಿಂದ ಭೂಮಿಯು ಸಂಪೂರ್ಣವಾಗಿ ಸೌರವ್ಯೂಹದಿಂದ ಹೊರಹಾಕಲ್ಪಡಬಹುದು. ಇನ್ನೊಂದು ಆಯಾಮದಲ್ಲಿ ಕಪ್ಪುಕುಳಿ ಸೂರ್ಯನಿಗೆ ಹತ್ತಿರವಾದಾಗ, ಸೂರ್ಯನಲ್ಲಿರುವ ಎಲ್ಲಾ ಅನಿಲವನ್ನು ಸ್ವಾಹ ಮಾಡಬಹುದು. ಆಗ ಸೌರವ್ಯೂಹದ ಗುರುತ್ವ ಕಪ್ಪುಕುಳಿಯ ಒಡಲೊಳು ಸೇರಿ ಭೂಮಿಯೂ ಅದರೊಳಗೆ ಸೇರಬಹುದು. ಅಂದರೆ ಭೂಮಿ ಮತ್ತು ಇತರ ಎಲ್ಲಾ ಗ್ರಹಗಳು ಕಪ್ಪುಕುಳಿಯ ಒಡಲೊಳು ಸೇರಿಕೊಳ್ಳುತ್ತವೆ. ಆಗ ನಮ್ಮ ಸೌರವ್ಯೂಹ ಸಂಪೂರ್ಣವಾಗಿ ನಾಶವಾಗುತ್ತದೆ.


**ಸಂಭವ ತೀರಾ ಕಡಿಮೆ :** ಅದೃಷ್ಟವಶಾತ್ ಈ ಮೇಲಿನ ಎಲ್ಲಾ ಘಟನೆಗಳು ನಡೆಯುವ ಸಂಭವ ತೀರಾ ಕಡಿಮೆ. ಏಕೆಂದರೆ ನಮ್ಮ ಬ್ರಹ್ಮಾಂಡದಲ್ಲಿ ಕಪ್ಪುಕುಳಿಗಳ ಚಟುವಟಿಕೆ ಅಷ್ಟೊಂದು ತೀವ್ರವಾಗಿಲ್ಲ ಎಂಬುದೇ ಸದ್ಯಕ್ಕೆ ನಿಶ್ಚಿಂತೆ. ಕಪ್ಪುಕುಳಿಗಳ ಬಗ್ಗೆ ನಾಸಾ ಸಾಕಷ್ಟು ಅಧ್ಯಯನಗಳನ್ನು ಕೈಗೊಂಡಿದೆ. ಇದಕ್ಕಾಗಿ ವಿಜ್ಞಾನಿಗಳ ತಂಡ ಹಗಲಿರುಳೂ ಟೆಲಿಸ್ಕೋಪ್‌ಗಳ ಸಹಾಯದಿಂದ ಕ್ಷಣಕ್ಷಣದ ಮಾಹಿತಿಯನ್ನು ಸಂಗ್ರಹಿಸುತ್ತಿದ್ದಾರೆ.

# ದೀರ್ಘಾಯುಷಿಗಳ ಜೀವನ ಪಾಠ

## ಅಭಿವೃದ್ಧಿಯ ವೇಗದಲ್ಲಿ ಒತ್ತಡದ ಜೀವನದಲ್ಲಿ ಭಾವನೆಗಳು ಬತ್ತಿ ಹೋಗುತ್ತಿವೆ. ದಿನದಿಂದ ದಿನಕ್ಕೆ old age home ವೃದ್ಧಾಶ್ರಮಗಳು ಹೆಚ್ಚುತ್ತಿವೆ

ಅಜ್ಜ ಅಜ್ಜಿಯರು ಎಂದರೆ ಎಲ್ಲರಿಗೂ ಸಂತೋಷ. ಮಕ್ಕಳಿರುವಾಗ ಅವರ ಹೇಳಿದ ಕಥೆಗಳು, ಅವರ ಕೈ ರುಚಿ ಅಡುಗೆಗಳು, ರಜಾದಿನದ ಅಜ್ಜಿ ಮನೆಯ ನೆನಪುಗಳು ಕಣ್ಮುಂದೆ ಬರುತ್ತವೆ. ಪ್ರತಿಯೊಬ್ಬರ ಜೀವನದಲ್ಲಿ ಅಜ್ಜ ಅಜ್ಜಿಯರ ಮಹತ್ವ ಬದುಕಿನ ನೆಲೆ ಬೆಲೆಯನ್ನು ಮನವರಿಕೆ ಮಾಡಿಕೊಳ್ಳುವ ಅವಶ್ಯಕತೆ ಇಂದು ಅನಿವಾರ್ಯವಾಗಿದೆ. ಪ್ರತಿಯೊಬ್ಬ ಮಾನವನ ಬದುಕಿನಲ್ಲಿ ಹುಟ್ಟಿನಿಂದ ಮರಣದವರಿಗೆ ಬಾಲ್ಯ, ಯೌವ್ವನ, ವೃದ್ಧಾಪ್ಯ ಅವಸ್ಥೆಗಳನ್ನು ಎಲ್ಲರ ಜೀವನದಲ್ಲಿಯೂ ಕಾಣುತ್ತೇವೆ. ವೃದ್ಧಾಪ್ಯವೆನ್ನುವುದು ಜೀವನದ ಸಂಜೆ. ಕೈಕಾಲುಗಳು ಶಕ್ತಿ ಕುಂದಿ, ಕಣ್ಣು ಮಂದವಾಗಿ, ಕಿವಿ ಕೇಳಿಸದಂತಾಗಿ, ಹಲ್ಲು ಬಿದ್ದು, ಮೈನಡುಗುವುದು ಮುಪ್ಪಿನ ಲಕ್ಷಣ. ಇದು ಎಲ್ಲರೂ ಅನುಭವಿಸುವ ಅವಸ್ಥೆಯು ಹೌದು.

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಮಕ್ಕಳು ತಂದೆ ತಾಯಿಗಳ ವೃದ್ಧಾಪ್ಯದಲ್ಲಿರುವವರ ಸೇವೆ ಮಾಡುವುದಕ್ಕೆ ಶ್ರೇಷ್ಠ ಮೌಲ್ಯವಿದೆ. ಮುಪ್ಪು ಎರಡನೇ ಬಾಲ್ಯದಂತೆ. ಅವರನ್ನು ಮಕ್ಕಳಂತೆ ಆರೈಕೆ ಮಾಡಬೇಕು. ಇದಕ್ಕೆ ಧಾರ್ಮಿಕ ಹಿನ್ನೆಲೆಯ ಮಹತ್ವವನ್ನು ನಮ್ಮ ಪುರಾತನರು ಕೊಟ್ಟಿದ್ದಾರೆ. ಹಿರಿಯರ ಸೇವೆ ಮಾಡಿದವರಿಗೆ ಸ್ವರ್ಗ ಪ್ರಾಪ್ತಿಯಾಗುತ್ತದೆ ಎನ್ನುವ ನಂಬಿಕೆಯೂ ಇದೆ. ಮುಪ್ಪಿನಲ್ಲಿ ಅವರ ಬುದ್ಧಿ ಪಕ್ವವಾಗಿರುತ್ತದೆ. ತಾವು ಜೀವನದಲ್ಲಿ ಅನುಭವಿಸಿದ ನೋವು ನಲಿವುಗಳಿಂದ ಅವರ ವಿವೇಚನಾ ಶಕ್ತಿ ಪಕ್ವವಾಗಿ ಕೈಗೊಳ್ಳುವ ನಿರ್ಧಾರಗಳು ಸಮರ್ಪಕವಾಗಿರುತ್ತವೆ. ಹಾಗಾಗಿ ನಮ್ಮಲ್ಲಿ ಹಿರಿಯರಿಗೆ ಅವರ ಮಾತುಗಳಿಗೆ ಗೌರವ ಕೊಡುವ ಸತ್ಸಂಪ್ರದಾಯವಿದೆ.



ರೇಖಾ ಪಾಟೀಲ
ಲೇಖಕಿ, ರಾಯಚೂರು

Scan For Digital Colourful
HAMPI TIMES E-paper

ಹಿರಿಯರನ್ನು ಗೌರವ ಪ್ರೀತಿಯಿಂದ ನೋಡಿಕೊಳ್ಳುವುದು ಒಂದು ಸಾಧನೆಯೇ ಸರಿ. ಮುಪ್ಪಿನವರು ಮನೆಯಲ್ಲಿರುವುದು ಒಂದು ಶೋಭೆ ಮಾತ್ರವಲ್ಲ ಒಂದು ಸುದೈವ. ಮನೆಯಲ್ಲಿ ಬೆಳೆಯುವ ಮಕ್ಕಳಿಗೆ ಕಥೆಗಳ ಮೂಲಕ ನೀತಿಯನ್ನು ಕಲಿಸಲು, ಅವರೊಂದಿಗೆ ಅವರಂತೆ ಆಗಿ ಆಟ ಆಡಿಸಲು ಅವರಿಗೆ ಸಹನೆ, ಸಮಯ ಎರಡು ಇರುತ್ತದೆ. ಇತ್ತೀಚಿನ ದಿನಗಳಲ್ಲಿ ತಂದೆ ತಾಯಿಗಳಿಗೆ ಮಕ್ಕಳ ಭಾವನಾತ್ಮಕ ಬೆಳವಣಿಗೆ ಕಡೆಗೆ ಗಮನ ಕೊಡಲಾಗುತ್ತಿಲ್ಲ. ದೇವರು, ಧರ್ಮ, ಸಂಸ್ಕೃತಿಯ ಮೌಲ್ಯಗಳು, ಸಂಪ್ರದಾಯಗಳು, ಪೂಜೆ ವ್ರತ ಆಚರಣೆಗಳ ಮಹತ್ವ ಇದೆಲ್ಲ ಇಂದಿನ ಮಕ್ಕಳಲ್ಲಿ ಕಾಣುತ್ತಿಲ್ಲ. ಸಂಸ್ಕಾರಯುತ ಗುಣಗಳು ಕಡಿಮೆಯಾಗಲು ಮುಪ್ಪಿನವರನ್ನು ನಿರ್ಲಕ್ಷಿಸಿರುವುದೇ ಪ್ರಮುಖ ಕಾರಣವಾಗಿದೆ.

ಜೀವನದಲ್ಲಿ ಉತ್ಸಾಹವೆಲ್ಲ ಬತ್ತಿ ಹೋದಾಗ ಅವರಿಗೆ ಬೇರೆಯವರ ಪ್ರೀತಿ ಬೇಕು. ಅಲ್ಲದೆ ಆ ಪ್ರೀತಿ ಸಿಕ್ಕಷ್ಟು ಬದುಕು ಸುಂದರವಾಗುತ್ತದೆ. ಅವರಿಗೆ "ತಾವು ಮಕ್ಕಳಿಗೆ ಬೇಕು. ತಮ್ಮ ಅವಶ್ಯಕತೆ ಇದೆ." ಎಂಬ ಭಾವನೆ ಬರಬೇಕು. ಹೊರತು ನಮ್ಮ ನಿರ್ಲಕ್ಷ ಮನೋಭಾವ, ತಿರಸ್ಕಾರದ ನಡವಳಿಕೆ ಅವರಿಗೆ 'ತಾವು ಬೇಡವಾಗಿದ್ದೇವೆ'. ಎನಿಸಿದರೆ ಅವರು ಬದುಕಿನ ಕೊನೆಯ ದಿನಗಳ ದಾರಿ ನೋಡುತ್ತಾ ಕೊರಗುವಂತಾಗುತ್ತದೆ.

ಇನ್ನು ನೋವಿನ ಸಂಗತಿ ಎಂದರೆ ಅಭಿವೃದ್ಧಿಯ ವೇಗದಲ್ಲಿ ಒತ್ತಡದ ಜೀವನದಲ್ಲಿ ಭಾವನೆಗಳು ಬತ್ತಿ ಹೋಗುತ್ತಿವೆ. ದಿನದಿಂದ ದಿನಕ್ಕೆ old age home ವೃದ್ಧಾಶ್ರಮಗಳು ಹೆಚ್ಚುತ್ತಿವೆ. ಮಕ್ಕಳು ಮೊಮ್ಮಕ್ಕಳ ಪ್ರೀತಿ ಬಯಸುವ ಕಾಲದಲ್ಲಿ ಅವರನ್ನೆಲ್ಲ ಬಿಟ್ಟಿರುವುದು



ಅನಿವಾರ್ಯ ಹೊರತು ತೃಪ್ತಿಯಿಂದ ಅಲ್ಲ. ಹಿರಿಯರ ಜೀವನಾನುಭವಗಳು ಮುಂದಿನವರಿಗೆ ದಾರಿದೀಪಗಳಾಗುತ್ತವೆ. ಅವರ ಹರಕೆ, ಆಶೀರ್ವಾದ, ಉಪದೇಶಗಳಿಂದ ಜೀವನ ಹಸನಾಗಬಲ್ಲದು. ಇಂತಹ ಹಿರಿಯರಿಂದ, ಅವಿಭಕ್ತ ಕುಟುಂಬದಿಂದ ಕೂಡಿದ ಮನೆಗಳಲ್ಲಿ ಮಾತ್ರ ಬದುಕಿನ ಸಾರ್ಥಕತೆ ಮತ್ತು ನೆಮ್ಮದಿ ಸಿಗಲು ಸಾಧ್ಯ. ಇದರಿಂದ ವಂಚಿತರಾದರೆ ಬದುಕನ್ನು ಕಟ್ಟಿಕೊಳ್ಳಲು ಬಹಳ ಪರದಾಡಬೇಕಾಗುತ್ತದೆ. ನೆನಪಿರಲಿ. ಅವರ ಜೀವನ ಅನುಭವವೇ ನಮ್ಮ ಜೀವನದ ತಳಹದಿ ಎನ್ನುವುದನ್ನು ಮರೆಯಬಾರದು. ಮುಪ್ಪು ನಮಗೂ ಬರುತ್ತದೆ ಎಂಬ ಎಚ್ಚರಿಕೆ ಎಲ್ಲರಿಗಿರಬೇಕು. ಮಾಡಿದ್ದುಣ್ಣೋ ಮಹಾರಾಯ ಎನ್ನುವಂತೆ ಜೀವನದ ಕೊನೆಯ ದಿನಗಳಲ್ಲಿ ಪರಿತಪಿಸುವಂತಾಗಬಾರದು. ತಂದೆ ತಾಯಿಯರ ಸೇವೆ ನಮ್ಮ ಕರ್ತವ್ಯ ಎನ್ನುವುದು ಜೀವನ ಪಾಠವಾಗಬೇಕು. ಬದುಕಿನ ಸುಂದರ ಕ್ಷಣಗಳನ್ನು ಮೆಲುಕು ಹಾಕುತ್ತಾ ಬದುಕಿಗೆ ಹೊಸ ಉತ್ಸಾಹ ಪೂರ್ತಿ ತುಂಬುತ್ತಾ ಸದಾ ಹಸನ್ಮುಖಿಗಳಾಗಿ ನಗುತ್ತಾ ನಗಿಸುತ್ತ ಬದುಕು ಸುಂದರವಾಗಿಸೋಣ.

ಹಂಪಿ ಟೈಮ್ಸ್
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**14–09–2024 – ಶನಿವಾರ**

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಉತ್ತರಾಷಾಢ |
| ಯೋಗ | : ಶೋಭನ |
| ಕರಣ | : ವಾಣಿಜ |
| ಸೂರ್ಯೋದಯ | : 06:14:20 |
| ಸೂರ್ಯಾಸ್ತ | : 18:30:01 |
| ರಾಹು ಕಾಲ | : 09:18–10:50 |
| ಯಮಘಂಡ ಕಾಲ | : 13:54–15:26 |
| ಗುಳಿಕ ಕಾಲ | : 06:14–07:46 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 13–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.90 ಅಡಿ |
| ಒಳ ಹರಿವು | 25671 ಕ್ಯುಸೆಕ್ |
| ಹೊರ ಹರಿವು | 24228 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.382 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1622.23 ಅಡಿ |
| ಒಳ ಹರಿವು | 2164 ಕ್ಯುಸೆಕ್ |
| ಹೊರ ಹರಿವು | 9958 ಕ್ಯುಸೆಕ್ |
| ಸಾಮರ್ಥ್ಯ | 67.806 ಟಿಎಂಸಿ |

# ಗ್ರಾಮೀಣ ಪ್ರದೇಶದಲ್ಲಿ ನೈರ್ಮಲ್ಯ ಸಾಧಿಸಲು ಜನರು ಕೈಜೋಡಿಸಿ

### ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ ಹೇಳಿಕೆ । ಸ್ವಚ್ಛತಾ ಹೀ ಸೇವಾ ಪಾಕ್ಷಿಕ

■ **ಹಂಪಿ ಟೈಮ್ಸ್ ಬಳ್ಳಾರಿ**

ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಜನರಲ್ಲಿ ನೈರ್ಮಲ್ಯ ಶುಚಿತ್ವ ಕುರಿತು ಅರಿವು ಮೂಡಿಸಲು ಜಿಲ್ಲೆಯಾದ್ಯಂತ ಸೆ.14 ರಿಂದ ಅ.01 ರ ವರೆಗೆ "ಸ್ವಚ್ಛತಾ ಹೀ ಸೇವಾ ಪಾಕ್ಷಿಕ–2024" ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಹೇಳಿದರು.

ಶುಕ್ರವಾರ ಜಿಪಂ ಕಚೇರಿಯ ವಿಡಿಯೋ ಸಂವಾದದ ಮೂಲಕ ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು.

ಸ್ವಚ್ಛತೆಗಾಗಿ ಬೃಹತ್ ಪ್ರಮಾಣದಲ್ಲಿ ಸಾರ್ವಜನಿಕರ ಸಹಭಾಗಿತ್ವ ಮತ್ತು ಸಮುದಾಯದ ಭಾಗವಹಿಸುವಿಕೆಯು ಅಗತ್ಯವಾಗಿದೆ.ಅನೈರ್ಮಲ್ಯ ಮತ್ತು ಸಮಸ್ಯಾತ್ಮಕ ಕಸದ ತಾಣಗಳನ್ನು ತೆರವುಗೊಳಿಸವತ್ತ ಗಮನಹರಿಸುವ ಕೆಲಸ ಬಾಗಬೇಕು ಎಂದರು.

ಜನರ ಭಾಗವಹಿಸುವಿಕೆಯೊಂದಿಗೆ ನೈರ್ಮಲ್ಯ ಧಾರಣೆಗೆ ಪ್ರಶಸ್ತ್ಯ ನೀಡುವ ಮೂಲಕ ಎಲ್ಲಾ ನಾಗರಿಕರು ಗ್ರಾಮೀಣ ಪ್ರದೇಶದಲ್ಲಿ ಸಂಪೂರ್ಣ ನೈರ್ಮಲ್ಯ ಸಾಧಿಸಲು ಕೈಜೋಡಿಸಬೇಕು ಎಂದರು.

ಪ್ರತಿ ವರ್ಷವು ಸ್ವಚ್ಛತಾ ಹೀ ಸೇವಾ ಪಾಕ್ಷಿಕ ಕಾರ್ಯಕ್ರವನ್ನು ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಜಲಶಕ್ತಿ ಮಂತ್ರಾಲಯ ಹಾಗೂ ಕೇಂದ್ರ ನಗರ ವಸತಿ ವ್ಯವಹಾರಗಳ ಸಚಿವಾಲಯವು ಹಮ್ಮಿಕೊಳ್ಳುತ್ತದೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜಯಂತಿಯಂದು ಅವರಿಗೆ ಗೌರವ ಸಲ್ಲಿಸಲು ಪ್ರತಿ ವರ್ಷ ಅಕ್ಟೋಬರ್ 2 ಅನ್ನು ಸ್ವಚ್ಛ ಭಾರತ ದಿನವನ್ನಾಗಿ ಆಚರಿಸಲಾಗುತ್ತಿದ್ದು, ಸ್ವಚ್ಛತೆಗಾಗಿ ಸ್ವಯಂ ಪ್ರೇರಣೆ ಮತ್ತು ಸಾಮೂಹಿಕ ಕ್ರಮವನ್ನು ಬಲಪಡಿಸಲು 2017 ರಿಂದ ಈ ಸ್ವಚ್ಛತಾ ಹೀ ಸೇವಾ ಪಾಕ್ಷಿಕ ಆಂದೋಲನವನ್ನು ಆಚರಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಈ ವರ್ಷ ಸ್ವಚ್ಛ ಭಾರತ ಅಭಿಯಾನದ 10 ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಯೋಜನೆಯ ಸಾಧನೆಯ ಮೈಲಿಗಲ್ಲನ್ನು ಗೌರವಿಸಲು ಸ್ವಚ್ಛತಾ ಹೀ ಸೇವಾ ಅಭಿಯಾನವನ್ನು ಸೆಪ್ಟೆಂಬರ್ 14 ರಿಂದ ಅಕ್ಟೋಬರ್ 1 ರವರಗೆ "ಸ್ವಭಾವ್ ಸ್ವಚ್ಛತಾ–ಸಂಸ್ಕಾರ್‌ಸ್ವಚ್ಛತಾ" ಎಂಬ ಧ್ಯೇಯದೊಂದಿಗೆ ಆಚರಿಸಲಾಗುತ್ತಿದೆ.

ಬೃಹತ್ ಶ್ರಮದಾನ ಚಟುವಟಿಕೆಗಳ ಮೂಲಕ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಲು ಕ್ರಮವಹಿಸಬೇಕು. ಜಲಮೂಲಗಳು, ರಸ್ತೆಗಳು, ರೈಲ್ವೆ ನಿಲ್ದಾಣ , ಕಸದ ರಾಶಿ, ನಾಲಾ ಸೇರಿ ಮುಂತಾದ ಸಮುದಾಯ ಸ್ವತ್ತುಗಳ ಮೇಲೆ ಕೇಂದ್ರಿಕರಿಸಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯ ಸ್ವಚ್ಛತೆಯ ಮೇಲೆ ಕೇಂದ್ರೀಕರಿಸುವ ಜನರ ಶ್ರಮದಾನದೊಂದಿಗೆ ಬೃಹತ್ ಸ್ವಚ್ಛತಾ ಅಭಿಯಾನಗಳನ್ನು ಆಯೋಜಿಸಬೇಕು ಎಂದು ಜಿಪಂ ಸಿಇಒ ನಿರ್ದೇಶನ ನೀಡಿದರು.



**ಸ್ವಚ್ಛತಾ ಕಿ ಭಾಗಿದಾರಿ:**

ಸ್ವಚ್ಛತಾ ಕಿ ಭಾಗಿದಾರಿ ಕಾರ್ಯಕ್ರಮದಡಿ ಪ್ರತಿ ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ, ಗ್ರಾಮಗಳಲ್ಲಿ ಸ್ಪರ್ಧೆಗಳು, ವಾಕಾಥಾನ್, ಸಸಿ ನೆಡುವಿಕೆಯಂತಹ ತೋಟಗಾರಿಕಾ ಅಭಿಯಾನಗಳು ಸೇರಿ ಮುಂತಾದ ವಿವಿಧ ಚಟುವಟಿಕೆಗಳ ಮೂಲಕ ಜಾಗೃತಿ ಮೂಡಿಸಲು ನಾಗರಿಕರು, ಸಮುದಾಯಗಳು ಮತ್ತು ಸಂಸ್ಥೆಗಳನ್ನು ವ್ಯಾಪಕವಾಗಿ ತೊಡಗಿಸಿಕೊಳ್ಳಬೇಕು.

ಅಭಿಯಾನದಲ್ಲಿ ಕ್ಲೀನ್ ಸ್ಟ್ರೀಟ್ ಫುಡ್ ಚಾಲೆಂಜ್, ವೇಸ್ಟ್ ಟು ಆರ್ಟ್, ಮರುಬಳಕೆಯ ಉತ್ಪನ್ನಗಳ ಮಾರಾಟ, ಸ್ವಚ್ಛ ಭಾರತ ಸಾಂಸ್ಕೃತಿಕ ಉತ್ಸವಗಳಂತಹ ನವೀನ ಚಟುವಟಿಕೆಗಳ ಆಯೋಜನೆ ಮಾಡಬೇಕು. ಅಭಿಯಾನದ ಸಂದೇಶವನ್ನು ಚಾಲನೆ ಮಾಡಲು ಸ್ಥಳೀಯ ಪ್ರಭಾವಶಾಲಿಗಳು ಮತ್ತು ಬ್ರಾಂಡ್ ರಾಯಭಾರಿಗಳನ್ನು ತೊಡಗಿಸಿಕೊಳ್ಳಲು ಕ್ರಮವಹಿಸಬೇಕು ಎಂದರು.

**ಸಫಾಯಿ ಮಿತ್ರ ಸುರಕ್ಷಾ ಶಿಬಿರಗಳು:**

ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಕಲ್ಯಾಣ ಯೋಜನೆಗಳೊಂದಿಗೆ ತಡೆಗಟ್ಟುವ ಆರೋಗ್ಯ ಆರೈಕೆ ಚಿಕಿತ್ಸೆ ಮತ್ತು ಸಂಪರ್ಕಕ್ಕಾಗಿ ಸಫಾಯಿ ಮಿತ್ರರಿಗೆ ಏಕ ಗವಾಕ್ಷಿ ಆರೋಗ್ಯ ಮತ್ತು ಕಲ್ಯಾಣ ಶಿಭಿರಗಳ ಆಯೋಜನೆ ಸೇರಿದಂತೆ ಇತರೆ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದರು.

ಜಿಪಂ ಉಪಕಾರ್ಯದರ್ಶಿ ಗಿರಿಜಾ ಶಂಕರ್, ಜಿಪಂ ಸಹಾಯಕ ನಿರ್ದೇಶಕ ಶರಣ ಬಸವರಾಜ, ಜಿಪಂ ಮುಖ್ಯ ಲೆಕ್ಕಾಧಿಕಾರಿ ಹಾಗೂ ಪ್ರಭಾರಿ ಯೋಜನಾ ನಿರ್ದೇಶಕ ವಿನೋದ್ ಕುಮಾರ್ ಸೇರಿದಂತೆ ಎಲ್ಲಾ ತಾಲ್ಲೂಕುಗಳ ಪಿಡಿಒ, ಇತರರು ಇದ್ದರು.

# ಯುಆರ್‌ಡಬ್ಲ್ಯೂ ಹುದ್ದೆಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ 2024–25ನೇ ಸಾಲಿನ ಕೂಡ್ಲಿಗಿ ತಾಲೂಕು ಮತ್ತು ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಹಗರಿಬೊಮ್ಮನಹಳ್ಳಿ ಪುರಸಭೆಯಲ್ಲಿ ಮತ್ತು ಕೂಡ್ಲಿಗಿ ಪಟ್ಟಣ ಪಂಚಾಯತಿಯಲ್ಲಿ ಖಾಲಿ ಇರುವ ತಲಾ ಒಂದು ನಗರ ಪುನರ್ವಸತಿ ಕಾರ್ಯಕರ್ತರ ಹುದ್ದೆಗಳಿಗೆ ವಿಕಲಚೇತನರಿಂದ ಅರ್ಜಿ ಆಹ್ವಾನಿಸಲಾಗಿದೆ.

ವಿಕಲಚೇತನರು ಅವಶ್ಯಕ ದಾಖಲೆಗಳೊಂದಿಗೆ ನಿಗದಿತ ಅರ್ಜಿಯ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು. ಅಭ್ಯರ್ಥಿಗಳು ಹುದ್ದೆಗೆ ಸಂಬಂಧಿಸಿದಂತೆ ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿರಬೇಕು. 18 ರಿಂದ 45 ವರ್ಷ ವಯೋಮಿತಿ ಹೊಂದಿದವರಾಗಿರಬೇಕು. ವಿಕಲಚೇತನ ಪ್ರತಿಶತ 40% ಮೇಲ್ಪಟ್ಟ ಯು.ಡಿ.ಐ.ಡಿ ಪ್ರಮಾಣ ಪತ್ರ ಹೊಂದಿರಬೇಕು. ತಹಶೀಲ್ದಾರಿಂದ ಪಡೆದ 10 ವರ್ಷದ ವಾಸಸ್ಥಳ ಪ್ರಮಾಣ ಪತ್ರವನ್ನು ಹೊಂದಿರಬೇಕು ಹಾಗೂ ಸ್ಥಳೀಯ ವಿಕಲಚೇತನರು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ನಗರ ಪುನರ್ವಸತಿ ಕಾರ್ಯಕರ್ತರನ್ನು ಹಗರಿಬೊಮ್ಮನಹಳ್ಳಿ ಪುರಸಭೆಯ ಮುಖ್ಯಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿ ಮುಖಾಂತರ ಹಾಗೂ ಕೂಡ್ಲಿಗಿ ತಾಲ್ಲೂಕಿನ ನಗರ ಪುನರ್ವಸತಿ ಕಾರ್ಯಕರ್ತರನ್ನು ಕೂಡ್ಲಿಗಿ ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿ ಮುಖಾಂತರ ಆಯ್ಕೆ ಮಾಡಲಾಗುತ್ತದೆ. ಅರ್ಜಿ ಸಲ್ಲಿಸಲು ಅಕ್ಟೋಬರ್ 10 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಎಮ್‌ಆರ್‌ಡಬ್ಲ್ಯೂ ಲಕ್ಷಣ ಮೊ: 9741185924, ಕೂಡ್ಲಿಗಿ ತಾಲ್ಲೂಕಿನ ಎಮ್‌ಆರ್‌ಡಬ್ಲ್ಯೂ ಚೌಡೇಶ ಬಿ.ಹೆಚ್. ಮೊ: 8217626361 ಹಾಗೂ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಕಾರ್ಯಾಲಯ, ತಾಲ್ಲೂಕು ಪಂಚಾಯತಿ ಆವರಣ, ಸಂಡೂರು ರಸ್ತೆ, ಹೊಸಪೇಟೆ, ಇವರನ್ನು ಕಛೇರಿಯ ಸಮಯದಲ್ಲಿ ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

# ಎಸ್.ಸಿ., ಎಸ್.ಟಿ ಕಲ್ಯಾಣ ಸಮಿತಿ ಸಭೆಗೆ ಸ್ಪಷ್ಟವಾಗಿ ಮಾಹಿತಿ ಒದಗಿಸಿ

### ಡಿಸಿ ಎಂ.ಎಸ್.ದಿವಾಕರ ಹೇಳಿಕೆ । ಎಸ್.ಸಿ., ಎಸ್‌ಟಿ ಕಲ್ಯಾಣ ಸಮಿತಿ ಪ್ರಗತಿ ಪರಿಶೀಲನಾ ಸಭೆ





■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ (ಎಸ್.ಸಿ., ಎಸ್.ಟಿ) ಕಲ್ಯಾಣ ಸಮಿತಿಯ ಸಭೆಗೆ ವಿಜಯನಗರ ಜಿಲ್ಲೆಯ ಅನುಷ್ಠಾನ ಇಲಾಖೆಗಳು ಎಸ್.ಸಿ., ಎಸ್.ಟಿ ಯೋಜನೆಗಳ ಪ್ರಗತಿ ವರದಿಯೊಂದಿಗೆ ಸ್ಪಷ್ಟವಾಗಿ ಮಾಹಿತಿ ಒದಗಿಸುವಂತೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕರ್ನಾಟಕ ವಿಧಾನಮಂಡಲದ ಎಸ್.ಸಿ., ಎಸ್‌ಟಿ ಕಲ್ಯಾಣ ಸಮಿತಿ ಪ್ರಗತಿ ಪರಿಶೀಲನಾ ಸಭೆಯ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೆಪ್ಟೆಂಬರ್ 13ರಂದು ಜಿಲ್ಲೆಯ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯು ಇದೇ ಸೆಪ್ಟೆಂಬರ್ 19 ರಿಂದ 21ರ ವರೆಗೆ ಕಲಬುರಗಿ ವಿಭಾಗದ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು, ಕಲಬುರಗಿ ವಿಭಾಗದ ಜಿಲ್ಲೆಗಳಾದ ಕಲಬುರಗಿ, ಯಾದಗಿರಿ, ಬೀದರ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ ಮತ್ತುಪರಿಶಿಷ್ಟಪಂಗಡದಸಮುದಾಯದವರ ಅಭಿವೃದ್ಧಿ, ಕಲ್ಯಾಣ, ಏಳಿಗೆಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಹಾಗೂ ಯೋಜನೆಗಳ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಸಲಿದೆ. ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಪ್ರಗತಿ ಪರಿಶೀಲನಾ ಸಭೆಯು ಸೆ.21ರಂದು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಪ್ರಗತಿ ಪರಿಶೀಲನೆ ಜರುಗಲಿದೆ. ವಿಜಯನಗರ ಜಿಲ್ಲೆಗೆ ಸಂಬಂಧಿಸಿದಂತೆ ಎಲ್ಲ ಅನುಷ್ಠಾನ ಇಲಾಖೆಗಳಲ್ಲಿ ಸಾಮಾನ್ಯ ಕಾರ್ಯಕ್ರಮಗಳು ಮತ್ತು ಎಸ್.ಸಿ.ಎಸ್.ಪಿ., ಟಿ.ಎಸ್.ಪಿ ಯೋಜನೆಗಳ ಅಡಿಯಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಸಮುದಾಯದವರ ಕಲ್ಯಾಣ ಕಾರ್ಯಕ್ರಮ ಗಳು, ವಿವಿಧ ಯೋಜನೆಗಳ ಅನುಷ್ಠಾನದ ಬಗ್ಗೆ ಹಲವು ಪ್ರಶ್ನಾವಳಿಗಳ ರಿತ್ಯ ಅಧಿಕಾರಿಗಳೊಂದಿಗೆ ಸಮಿತಿಯು ಚರ್ಚೆ ನಡೆಸಲಿದೆ ಎಂದರು.

ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದವರ ಅಭಿವೃದ್ಧಿ, ಕಲ್ಯಾಣ, ಏಳಿಗೆಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಹಾಗೂ ಯೋಜನೆಗಳವಾರು ಪ್ರಗತಿ ವರದಿಯನ್ನು ಸಂಬಂಧಪಟ್ಟ ಎಲ್ಲ ಇಲಾಖೆಗಳು ನಿಗದಿತ ಅವಧಿಯೊಳಗೆ ಸಲ್ಲಿಸಬೇಕು. ಇಲಾಖೆಗಳು ಸಲ್ಲಿಸಿದ ಮಾಹಿತಿಯುಳ್ಳ ಬುಕ್ ಲೆಟ್ ಸಿದ್ದಪಡಿಸಿ ಎಸ್.ಸಿ., ಎಸ್.ಟಿ ಕಲ್ಯಾಣ ಸಮಿತಿ ಪ್ರಗತಿ ಪರಿಶೀಲನಾ ಸಭೆಗೆ ಕಳುಹಿಸಿಕೊಡಲು ಮತ್ತು ಮಾಹಿತಿ ನೀಡದ ಇಲಾಖೆಗಳಿಗೆ ನೋಟೀಸ್ ಜಾರಿಗೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ತ್ವರಿತವಾಗಿ ಕ್ರಮ ಕೈಗೊಳ್ಳಬೇಕು. ಸ್ಪಷ್ಟ ಮಾಹಿತಿ ನೀಡುವಲ್ಲಿ ನಿಮಗೆ ಸಮಸ್ಯೆಯಿದ್ದಲ್ಲಿ ಮೇಲಾಧಿಕಾರಿಗಳಿಂದ ಕೇಳಿ, ಸರಿಯಾದ ಮಾಹಿತಿಯನ್ನು ಕೂಡಲೇ ಒದಗಿಸಬೇಕು. ಈ ಹಿನ್ನೆಲೆಯಲ್ಲಿ ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್., ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಮಂಜುನಾಥ ಹೆಚ್.ಎಸ್. ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಉಪಸ್ಥಿತರಿದ್ದರು.

# ಸಾರ್ವಜನಿಕರು ಭಾಗವಹಿಸಲು ಮನವಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಸೆಪ್ಟೆಂಬರ್ 15ರಂದು ಹಮ್ಮಿಕೊಳ್ಳಲಾಗಿರುವ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ವಿಜಯನಗರ ಜಿಲ್ಲೆಯಲ್ಲಿ ಬೃಹತ್ ಮಾನವ ಸರಪಳಿ ರಚಿಸಲಾಗುತ್ತಿದ್ದು, ಈಗಾಗಲೇ ನಿರ್ಧರಿಸಿದಂತೆ ರೂಟ್ ಮ್ಯಾಪ್ ಅಂತಿಮವಾಗಿರುತ್ತದೆ.

ಆದರನ್ವಯ ಮಾನವ ಸರಪಳಿ ಕೊಪ್ಪಳ ರಸ್ತೆಯಿಂದ ಎನ್.ಹೆಚ್.50 ರಾಷ್ಟ್ರೀಯ ಹೆದ್ದಾರಿ ಮುಖೇನ ವಿಜಯನಗರ ಜಿಲ್ಲೆಯ ಸರಹದ್ದು ಆದ ಟಿ.ಬಿ.ಡ್ಯಾಮ್ ಹತ್ತಿರದ ಗಣೇಶ ದೇವಸ್ಥಾನದಿಂದ ಪ್ರವೇಶಗೊಂಡು ಹೊಸಪೇಟೆ ನಗರ, ಕಾರಿಗನೂರು, ವಡ್ಡಹಳ್ಳಿ, ಪಿ.ಕೆ.ಹಳ್ಳಿ ಬೈಲುವದ್ದಿಗೆರೆ. ಧರ್ಮಸಾಗರ, ಗಾದಿಗನೂರು ಹಾಗೂ ಜಿಲ್ಲೆಯ ಸರಹದ್ದು ಅಂತಿಮ ಗ್ರಾಮವಾದ ಭುವನಹಳ್ಳಿವರೆಗೆ (ಸುಮಾರು40ಕಿ.ಮೀ)ರಚಿಸಬೇಕಾಗಿರುತ್ತದೆ. ಕಾರಣ ಕಾರ್ಯಕ್ರಮದಲ್ಲಿ ಸರ್ಕಾರಿ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳ, ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಸಮುದಾಯ ಮುಖಂಡರು, ಹಾಗೂ ಎಲ್ಲಾ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶ್ವಸಿಗೊಳಿಸಬೇಕು ಎಂದು ಹೊಸಪೇಟೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು (ಗ್ರೇಡ್–1) ತಿಳಿಸಿದ್ದಾರೆ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು
ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

**10 ನೇ ತರಗತಿ** **ಹಿಂದಿ**

### ईमानदारों के सम्मेलन में

**I . अनुरूपता :**

1) मेरा बचपन : आत्मकथा : ईमानदारों के सम्मेलन में :------------ **( व्यंग्य रचना )**

2) पहला दिन : चप्पलें गायब थी :: दूसरे दिन : ----------- **( धूप का चश्मा )**

3) रेल गाडी : पटरी :: हवाईजहाज :-------- **( आसमान )**

4) कश्मीरी सेब : प्रेमचंद : ईमानदारों के सम्मेलन में :---- **( हरिशंकर परसाई )**

**II . एक वाक्य में उत्तर लिखिए |**

5) लेखक पहनने के कपड़े कहाँ दबाकर सोये ?
लेखक पहनने के कपड़े **सिरहाने के नीचे** दबाकर सोये |

6) लेखक पहनने के कपड़े सिरहाने के नीचे दबाकर क्यों सोये ? (2019 )
**सभी चीजें चोरी हो रही थी, इसलिए** लेखक ने पहनने के कपडे सिरहाने के नीचे दबाकर सोये |

7) लेखक दूसरे दर्जे में क्यों सफर करना चाहते थे ? (2018 )
**150 रूपये बचाने के लिए** लेखक दूसरे दर्जे मे सफर करना चाहते थे |

8) सम्मेलन में लेखक के भाग लेने से किन-किन की प्रेरणा मिलेगी ?
सम्मेलन में लेखक के भाग लेने से **इमानदारों तथा उदीयमान इमानदारों को बडी प्रेरणा** मिलेगी |

9) ब्रीफकेस में क्या था ?
ब्रीफकेस में **कागजात** थे |

10) लेखक अपने धूप का चश्मा कहां रखा था ?
लेखक ने धूप का चश्मा **कमरे की टेबुल पर** रखा था |

11)स्वागत समिति के मंत्री किसको डाँटने लगे ?
स्वागत समिति के मंत्री **कार्यकर्तावों को** डाँटने लगे |

**III.दो - तीन वाक्यों में उत्तर लिखिए**

**12)फूल मालाएँ मिलने पर लेखक क्या सोचने लगे ?**
फूल मालाएँ मिलने पर लेखक ने इस तरह सोचने लगा कि - आस - पास कोई माली होता तो पहने हुए फूल मालाएँ भी बेचकर पैसे जमा कर लेता था |

**13) चप्पलों की चोरी होने पर ईमानदार डेलीगेट ने क्या सुझाव दिया ?(April -2023)**
चप्पलों की चोरी होने पर ईमानदार डेलीगेट ने इस तरह सुझाव दिया कि -" देखिए, चप्पलें एक जगह नही उतारनी चाहिए | एक ही जगह जोडी होगी , तो कोई भी पहन लेगा | मैने ऐसा ही किया था | "

**14) लेखक ने कमरा छोडकर जाने का निर्णय क्यों लिया ? ( 2019, June -2023 )**
सम्मेलन में लेखक के सभी सामान चोरी हो गये थे | ताला तक चुरा लिया गया था | अब वे बचे थे | अगर वे वहीं रूके तो वे भी चुरा हो जाने की संभावना थी | इसलिए लेखक ने कमरा छोडकर जाने का निर्णय लिया |

**IV. तीन-चार वाक्यों में उत्तर लिखिए |**

**15) लेखक को भेजे गये निमंत्रण पत्र में क्या लिखा गया ?**
लेखक को भेजे गये निमंत्रण पत्र में इस तरह लिखा गया था कि - " हम लोग इस शहर में एक ईमानदार सम्मेलन कर रहे हैं | आप देश के प्रसिद्ध ईमानदार हैं | हमारी प्रार्थना है कि आप इस सम्मेलन का उद्घाटन करें | हम आपको आने- जाने का पहले दर्जे का किराय देंगे तथा आवास, भोजन आदी का उत्तम व्यवस्था करेंगे | आपके आगमान से ईमानदार तथा उदीयमान ईमानदारों को बडी प्रेरणा मिलेगी |

( ----- ಮುಂದುವರೆಯುವುದು )

ಮಾರ್ಗದರ್ಶಿ ಶಿಕ್ಷಕರು : **ಹೆಚ್.ತುಕಾರಾಮ್ ನಾಯ್ಕ**, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055